# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ






REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 11-04-2025 to 17-04-2025 ಬೆಲೆ: 7-00 ಸಂಪುಟ–4 ಸಂಚಿಕೆ–42 ಪುಟಗಳು–6












ಮಳೆಗಾಲ ಸಮೀಪಿಸುತ್ತಿದ್ದು, ಅದರ ಜೊತೆ ಚಂಡಮಾರುತದಂತಹ ಪ್ರಕೃತಿ ವಿಕೋಪಗಳಿಂದ ಅಲ್ಲಲ್ಲಿ ಗಾಳಿ ಮಳೆಯಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ರಸ್ತೆ ಬದಿಗಳಲ್ಲಿ, ಶಾಲಾ ಕಾಲೇಜುಗಳ ಆವರಣಗಳಲ್ಲಿ ಮತ್ತು ಮನೆಯ ಅಕ್ಕ ಪಕ್ಕದಲ್ಲಿ ಒಣಗಿ ನಿಂತ ಬೃಹತ್ ಮರಗಳು ನಮಗೆ ಕಾಣಸಿಗುತ್ತಿದೆ. ಇಂತಹ ಒಣಗಿದ ಮರಗಳಿಂದ ಇಂದಲ್ಲ ನಾಳೆ ಅಪಾಯ ಕಟ್ಟಿಟ್ಟ ಬುತ್ತಿ. ಹಾಗಾಗಿ ಮಳೆಗಾಲ ಪ್ರಾರಂಭವಾಗುವ ಮುನ್ನವೇ ಇಂತಹ ಮರಗಳನ್ನು ತೆರವುಗೊಳಿಸಿ ಪ್ರಾಣಾಪಾಯಗಳು ಸಂಭವಿಸದಂತೆ ತಡೆಯುವ ಕೆಲಸವಾಗಬೇಕಾಗಿದೆ.

## ಭೂಮಿ ಸಕ್ರಮಗೊಳಿಸದೆ ವಿರಮಿಸೆನು: ಅಶೋಕ್ ರೈ



**ಉಪ್ಪಿನಂಗಡಿ:** ಬಹುತೇಕ ಹಿಂದೂ ಧಾರ್ಮಿಕ ಕೇಂದ್ರಗಳ ಭೂ ದಾಖಲೆಗಳು ಸರಕಾರಿ ಒಡೆತನವನ್ನೇ ಹೊಂದಿದ್ದು, ಎಲ್ಲಾ ಧಾರ್ಮಿಕ ಕೇಂದ್ರಗಳ ಭೂಮಿಯನ್ನು ಸಕ್ರಮಗೊಳಿಸದೆ ವಿರಮಿಸೆನು ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ತಿಳಿಸಿದ್ದಾರೆ. ಅವರು ಉಪ್ಪಿನಂಗಡಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಈ ಹಿಂದಿನ ಬಿಜೆಪಿ ಸರಕಾರದ ಅವಧಿಯಲ್ಲಿ ಧಾರ್ಮಿಕ ಪರಿಷತ್ತಿನ ಎಲ್ಲಾ ಸದಸ್ಯರಲ್ಲಿ, ಮಂತ್ರಿಗಳಲ್ಲಿ **3ನೇ ಪುಟಕ್ಕೆ**

## ರಾಜ್ಯದಲ್ಲಿ ಹಿಂದೂಗಳಿಗೆ ಅಪಮಾನ –ಬಿ ವೈ ವಿ



**ಮಂಗಳೂರು:** ರಾಜ್ಯದಲ್ಲಿ ಹಿಂದೂಗಳಿಗೆ ಅಪಮಾನ ಮಾಡುವ ಕೆಲಸ ಸಿದ್ದರಾಮಯ್ಯ ಮಾಡುತ್ತಿದ್ದಾರೆ. ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಉತ್ತರ ಕೊಡಬೇಕಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಅವರು ನಗರದಲ್ಲಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಜನಾಕ್ರೋಶ ಯಾತ್ರೆಯಲ್ಲಿ ಮಾತನಾಡಿ, ಬಜೆಟ್‌ನಲ್ಲಿ ಮುಸ್ಲಿಮರಿಗೆ ಮೀಸಲಾತಿ ಕೊಡುವ ಈ ರಾಜ್ಯದ ಮುಖ್ಯಮಂತ್ರಿ **3ನೇ ಪುಟಕ್ಕೆ**

## ರಾಜ್ಯದ ಆರ್ಥಿಕ ಸ್ಥಿತಿ ಸದೃಢ –ಪರಮೇಶ್ವರ್



**ಬೆಂಗಳೂರು:** ಬಂಡವಾಳ ಹೂಡಿಕೆಯಲ್ಲಿ ಮತ್ತು ಜಿಎಸ್‌ಟಿ ಕಟ್ಟುವುದರಲ್ಲಿ ದೇಶದಲ್ಲೇ ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ. ರಾಜ್ಯದ ಆರ್ಥಿಕ ಸ್ಥಿತಿ ಸಶಕ್ತವಾಗಿದೆ' ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ. ಅವರು ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿ, ಬಜೆಟ್ ಬಳಿಕ ರಾಜ್ಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗುತ್ತಿದೆ. ದೇಶದಲ್ಲಿ ಬಂಡವಾಳ ಹೂಡಿಕೆಯಲ್ಲಿ ಮೂರನೇ ರಾಜ್ಯ ಕರ್ನಾಟಕ. ಜಿಎಸ್‌ಟಿ ಕಟ್ಟುತ್ತಿರುವುದರಲ್ಲಿ ನಾವು ಎರಡನೇ ಸ್ಥಾನದಲ್ಲಿ ಇದ್ದೇವೆ. ಇದರಿಂದ ನಮ್ಮ ಆರ್ಥಿಕತೆ **3ನೇ ಪುಟಕ್ಕೆ**







# ಸಂಪ್ರದಾಯ

## ಕರಗ




ಕರಗ ಕರ್ನಾಟಕದ ಪ್ರಸಿದ್ಧ ಧಾರ್ಮಿಕ ಆಚರಣೆಯಾಗಿದ್ದು, ವಹ್ನಿಕುಲ ಕ್ಷತ್ರಿಯ ಜನಾಂಗದವರು ಶ್ರೀ ದ್ರೌಪದಿಯನ್ನು ಕುಲದೇವತೆಯಾಗಿ ಆರಾಧಿಸುತ್ತಾರೆ. ಕರಗ ಪೂಜೆ ಮತ್ತು ಉತ್ಸವಗಳು ತಮಿಳುನಾಡಿನಲ್ಲಿ ಬಹು ಹಿಂದಿನಿಂದಲೂ ವೈಭವದಿಂದ ಆಚರಿಸಲ್ಪಡುತ್ತಿದೆ. ಕರ್ನಾಟಕದ ಬೆಂಗಳೂರು, ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಈ ಆಚರಣೆ ಇಂದಿಗೂ ರೂಢಿಯಲ್ಲಿದೆ. ಬೆಂಗಳೂರಿನ ಕರಗ ವಿಶ್ವ ಪ್ರಸಿದ್ಧಿಯಾಗಿದೆ. ವಹ್ನಿಕುಲ ಕ್ಷತ್ರಿಯ ಜನಾಂಗದವರು ಕಳಸ ಹೊತ್ತು ನೃತ್ಯ ಮಾಡುತ್ತಾ ದೇವರ ಹರಕೆ ಒಪ್ಪಿಸುವ ಆಚರಣೆ. ಹನ್ನೊಂದು ದಿನಗಳ ಕಾಲ ಕರಗದ ಆಚರಣೆ ನಡೆಯುತ್ತದೆ. ದಂತಕತೆಯ ಪ್ರಕಾರ ಕುರುಕ್ಷೇತ್ರ ಸಮರದ ನಂತರ ಪಾಂಡವರು ಸ್ವರ್ಗಾರೋಹಣ ಮಾಡುವ ಸಂದರ್ಭದಲ್ಲಿ ದ್ರೌಪದಿ ಮೂರ್ಛಿತಳಾಗಿ ಬಿದ್ದಳಂತೆ. ದ್ರೌಪದಿ ಮೂರ್ಛಿತಳಾಗಿ ಬಿದ್ದದ್ದು ಪಾಂಡವರಿಗೆ ತಿಳಿಯದೆ ಮುಂದೆ ನಡೆಯುತ್ತಾರೆ. ಆಕೆಗೆ ಎಚ್ಚರ ಬಂದು ನೋಡಿದಾಗ ತಿಮಿರಾಸುರ ಎಂಬ ರಾಕ್ಷಸ ದೂರದಲ್ಲಿ ನಿಂತಿದ್ದ, ಆಗ ದ್ರೌಪದಿ ಆದಿಶಕ್ತಿಯ ರೂಪವನ್ನು ತೋರುತ್ತಾ ತಿಮಿರಾಸುರನನ್ನು ಸದೆ ಬಡಿಯಲು, ತನ್ನ ತಲೆಯಿಂದ 'ಯಜಮಾನ'ರನ್ನು, ಹಣೆಯಿಂದ 'ಗಣಾಚಾರಿ'ಗಳನ್ನು, ಕಿವಿಗಳಿಂದ 'ಗೌಡ'ರನ್ನು, ಬಾಯಿಯಿಂದ 'ಗಂಟೆಪೂಜಾರಿ'ಗಳನ್ನು ಮತ್ತು ಹೆಗಲಿನಿಂದ 'ವೀರಕುಮಾರ'ರನ್ನು ಸೃಷ್ಟಿ ಮಾಡುತ್ತಾಳೆ. ಹೀಗೆ ಹುಟ್ಟಿದ ಇವರೆಲ್ಲರೂ ಸೇರಿ ಆ ರಕ್ಕಸ ಎದುರು ಹೋರಾಡಿ ಗೆಲ್ಲುತ್ತಾರೆ. ಹೀಗೆ ಮಕ್ಕಳನ್ನು ಹುಟ್ಟಿಸಿದ ದ್ರೌಪದಿ ಆದಿಶಕ್ತಿಯಾಗಿ, ಮತ್ತೆ ಭೂಮಿಗೆ ಮರಳಿ ಬಾರದಂತೆ ಕೈಲಾಸಕ್ಕೆ ಹೋಗುವುದು ಮಕ್ಕಳಿಗೆ ದುಗುಡ ಉಂಟು ಮಾಡುತ್ತದೆ. ಅವಳು ಹೋಗದಂತೆ ಬೇಡಿಕೊಳ್ಳಲು ಕೃಷ್ಣನು ಅವರಿಗೆ, ತಾಯಿಯನ್ನು ಹೋಗದಂತೆ ತಡೆಯಲು ತಮ್ಮ ಕೈಯಲ್ಲಿರುವ ಕತ್ತಿಯಿಂದ ಎದೆಗೆ ತಿವಿದು ಕೊಳ್ಳುತ್ತಾ "ನಮಗೆ ನೀನಲ್ಲದೆ ಇನ್ನಾರು ದಿಕ್ಕು, ಹೋಗದಿರು" ಎಂದು ಅವಲತ್ತು ಕೊಳ್ಳಲು ಹೇಳುವನು. ಇದನ್ನು ನೋಡಿ ದ್ರೌಪದಿಗೆ ಮರುಕವಾಗಿ ಪ್ರತಿ ವರುಷವೂ ಮೂರು ದಿನ ಭೂಮಿಗೆ ಬಂದು ಮಕ್ಕಳೊಂದಿಗೆ ಇರುವ ಮಾತು ನೀಡುತ್ತಾಳೆ. ಆ ಮೂರು ದಿನಗಳೇ ಕರಗ ಹಬ್ಬದ ದಿನಗಳು.

# ಸಂಪಾದಕೀಯ

ಕರಾವಳಿ ತರಂಗಿಣಿ

## ದೇಶ ಪ್ರೇಮವೇ ಧರ್ಮವಾದಾಗ..

– ಲಲಿತಶ್ರೀ ಪ್ರೀತಮ್ ರೈ



ಪ್ರಸ್ತುತ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡುತ್ತಿದ್ದರೆ, ಅದೂ ಭರತ ಖಂಡದಲ್ಲಿ ನಡೆಯುತ್ತಿರುವುದನ್ನು ನೋಡಿದಾಗ ವಿಶ್ವವೇ ಇತ್ತ ತಿರುಗಿ ನೋಡುತ್ತಿದೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಆದರೆ ಮೊಸರಿನಲ್ಲಿ ಕಲ್ಲನ್ನು ಹುಡುಕುವ ಮಂದಿಗೆ ಅದೆಲ್ಲವೂ ತಪ್ಪಾಗಿ ಕಾಣುತ್ತದೆ. ಆದರೂ ನಮ್ಮ ದೇಶದಿಂದ ಹೊರಗೆ ಇರುವ ಭಾರತೀಯರಿಗೆ ಈಗ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಏನು ಅನ್ನಿಸುತ್ತಿರಬಹುದು ಎನ್ನುವುದು ನನಗೆ ಯಾವಾಗಲೂ ಕಾಡುವ ಕುತೂಹಲ. ಅದಕ್ಕಾಗಿ ಅನಿವಾಸಿ ಭಾರತೀಯರು ಸಿಕ್ಕಾಗ ಎಲ್ಲಾ ಇಂತಹ ವಿಷಯಗಳ ಬಗ್ಗೆ ಮಾತಾಡುತ್ತಿರುತ್ತೇನೆ. ಮೊನ್ನೆಯಷ್ಟೇ ಮೈಸೂರಿನಿಂದ ಹೋಗಿ ದೂರದ ಲಂಡನ್‌ನಲ್ಲಿ ನೆಲೆಸಿರುವ ಸಾಫ್ಟ್ ವೇರ್ ಇಂಜಿನೀರ್ ಒಬ್ಬರನ್ನು ಬೇಟಿಯಾದೆ. ಮಾಮೂಲಿಯಂತೆ ನನ್ನ ಮಾತು ಈಗಿನ ಭಾರತದ ಬೆಳವಣಿಗೆಗಳ ಬಗ್ಗೆ ತಿರುಗಿತು. ನನ್ನ ಮಾತು ಕೇಳುತ್ತಿದ್ದಂತೆ ಅವರು ಹಸನ್ಮುಖರಾಗಿದ್ದು ನೋಡಿ ಅಬ್ಬಾ ನನ್ನ ಮಾತಿನಲ್ಲಿ ಇವರಿಗೂ ಆಸಕ್ತಿ ಇದೆ ಎನ್ನುವುದು ನನಗೆ ಮನವರಿಕೆಯಾಯಿತು. ಅವರು ಹೇಳಿದ ಹಾಗೆ ಇತ್ತೀಚಿನ ದಿನಗಳಲ್ಲಿ ಹೊರಗಿನ ದೇಶಗಳಲ್ಲಿ ಭಾರತೀಯ ಪ್ರಾಡಕ್ಟ್‌ಗಳಿಗೆ ಹೆಚ್ಚಿನ ಮಾರುಕಟ್ಟೆ ಸಿಕ್ಕಿದೆ. ಅವರು ವಾಸಿಸುವ ಸಿಟಿಯಲ್ಲಿ ಒಂದೋ ಎರಡೋ ಇದ್ದ ಭಾರತೀಯ ಹೊಟೇಲುಗಳ ಸಂಖ್ಯೆ ಹತ್ತಿರ ಹತ್ತಿರ ಇಪ್ಪತ್ತರ ಗಡಿ ದಾಟಿ ಬಿಟ್ಟಿದೆಯಂತೆ. ಒಂದು ಕಾಲದಲ್ಲಿ ಭಾರತದಿಂದ ಹೋಗುತ್ತಿದ್ದ ಬೇಡಿಕೆ ಇರದಿದ್ದ ನಮ್ಮೂರ ತೆಂಗಿನ ಎಣ್ಣೆ ಇವತ್ತು ಎಲ್ಲಾ ಸ್ಮಾರ್ಟ್ ಬಜಾರ್‌ಗಳಲ್ಲೂ ಸಿಗುವಂತಾಗಿದೆಯಂತೆ. ಹೆಣ್ಣು ಮಕ್ಕಳಲ್ಲವೇ ಅಡುಗೆ ಮನೆಗೆ ಬೇಕಾದ ಪದಾರ್ಥಗಳ ಬಗ್ಗೆ ಆಸಕ್ತಿ ಹೆಚ್ಚು. ಅಂತೂ ಮೋದಿಜಿ ಬಂದ ಮೇಲೆ ದೇಶ ವಾಸಿಗಳಲ್ಲಿ ಕೆಲವರು ಖುಷಿಯಾಗಿಲ್ಲದಿದ್ದರೂ, ಅನಿವಾಸಿಯರು ಖುಷಿಯಾಗಿದ್ದಾರೆ ಎಂದುಕೊಂಡೆ. ಅದೇ ಸಮಯದಲ್ಲಿ ಉಡುಪಿಯ ಮಹಿಳೆಯೊಬ್ಬರು (ಇಲ್ಲಿ ಧರ್ಮದ ಬಗ್ಗೆ ಹೇಳುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಸಮಾಧಾನದ ಮಾತುಗಳು ಮತ್ತು ಬೆದರಿಕೆಗಳು ಬರುತ್ತಿರುವುದರಿಂದ ನನ್ನ ಧರ್ಮ ಬಿಟ್ಟು ಪಕ್ಕದವರ ಧರ್ಮದ ಕುರಿತು ಮಾತನಾಡಲಾರೆ ಎಂದು ನಮ್ಮೆಜಮಾನರಿಗೆ ಮಾತು ಕೊಟ್ಟಿದ್ದೇನೆ) ನಮ್ಮ ದೇಶದಲ್ಲಿ ಅಭಿವೃದ್ಧಿ ಏನೂ ಆಗಿಲ್ಲ. ಎಲ್ಲೆಂದರಲ್ಲಿ ಕಸ ಬಿಸಾಕುತ್ತಾರೆ ಎನ್ನುತ್ತಾ, ಪಕ್ಕದ ಬೂತಾನ್ ದೇಶದಲ್ಲಿ ಆದ ಅಭಿವೃದ್ದಿಯ ಬಗ್ಗೆ ಮಾತಾಡುವುದಕ್ಕೆ ಪ್ರಾರಂಬಿಸಿ ಬಿಟ್ಟರು. ಅವರ ಮಾತಿನ ದಾಟಿ ಮೋದಿಗೆ ಬೈಯ್ಯಬೇಕು, ಆದರೆ ನೇರವಾಗಿ ಯಾರನ್ನೋ ಬಯ್ಯಲು ಆಗದೇ ದೇಶವನ್ನೇ ದೂರುವುದಕ್ಕೆ ಶುರು ಮಾಡಿಬಿಟ್ಟರು. ಭಾರತದಲ್ಲಿ ಅಭಿವೃದ್ಧಿ ಬದಲು ಹಿಂದುತ್ವದ ಹಿಂದೆ ಬಿದ್ದಿದ್ದಾರೆ. ಸರಿ ಸುಮಾರು ಹದಿನೈದು ನಿಮಿಷಗಳ ಕಾಲ ನಾವೆಲ್ಲರೂ ಕುಳಿತು ಕೇಳಿಸಿಕೊಂಡೆವು. ಕೊನೆಗೆ ನನ್ನ ಮಕ್ಕಳಿಬ್ಬರು ಐರ್‌ಲ್ಯಾಂಡ್‌ನಲ್ಲಿ ಇದ್ದಾರೆ. ನಮಗೆ ಅದುವೇ ಸ್ವರ್ಗ ಎನ್ನುತ್ತಾರೆ. ಅಭಿವೃದ್ದಿ ಎಂದರೆ ಹಾಗಿರಬೇಕು ಎನ್ನುವುದೇ. ಅಲ್ಲಿವರೆಗೂ ಇದನ್ನೆಲ್ಲಾ ಕೇಳಿಕೊಂಡು ಒಳಗೊಳಗೆ ಬೆಂಕಿಯ ಕಿಡಿ ಹೊತ್ತಿಕೊಂಡಿದ್ದರೂ ನಮ್ಮ ದೇಶದ ಬಗ್ಗೆ ಈ ಮಹಾತಾಯಿ ಮಾತನಾಡುವುದನ್ನು ಕೇಳುತ್ತಾ ಸಮಾದಾನದಲ್ಲೇ ಕೂತಿದ್ದೆ. ನನ್ನ ಜೊತೆಯಲ್ಲಿ ಇದ್ದ ಮಹಿಳಾ ಮಣಿಗಳು ಆಗಲೇ ಆ ಮಹಾತಾಯಿಯನ್ನು ಕುಟುಕುತ್ತಿದ್ದರು. ಆದರೂ ನಾನು ಸಮಾದಾನದಿಂದಲೇ ಕೇಳಿದೆ "ನೀವು ಯಾವಾಗ ಸ್ವರ್ಗಕ್ಕೆ ಹೋಗುವುದು" ಅಂತ. ನನ್ನ ಜೊತೆಗಾರ್ತಿಯರು ಗುಲ್ಲಂತ ನಕ್ಕುಬಿಟ್ಟರು. ಆ ಹೆಂಗಸು ಇನ್ನಷ್ಟು ರೊಚ್ಚಿಗೆದ್ದು ಬಿಡುವುದೇ. ಇಂತವರ ಜೊತೆ ಮಾತನಾಡುವುದು ಹುಚ್ಚುತನ ಎನ್ನುವುದು ನನಗನಿಸಿದರೂ ಎಲ್ಲರ ಜೊತೆ ಸೇರಿಕೊಂಡು ಸ್ವಲ್ಪ ಮಾತನಾಡಿದರೂ ಆ ಹೆಂಗಸು ಬದ್ದ ಮೋದಿಜಿಯ ಶತ್ರು ಎನ್ನುವುದಂತೂ ನನಗೆ ಅರ್ಥ ಆಗಿತ್ತು. ಮೋದಿಗೆ ಅದೆಷ್ಟು ಶತ್ರುಗಳಿದ್ದಾರೋ ಅದಕ್ಕಿಂತ ಹೆಚ್ಚು ಅಭಿಮಾನಿಗಳ ಹಾರೈಕೆ ಇದೆ ಎನ್ನುವ ಮಾತನ್ನು ಅಲ್ಲೇ ಕುಳಿತಿದ್ದ ತಾಯಿಯೊಬ್ಬರು ಮೆತ್ತಗೆ ಹೇಳಿದರು. ಅದು ನಿಜ ಎನ್ನಿಸದೇ ಇರಲಿಲ್ಲ. ಪತ್ರಕರ್ತರಿಗೆ ರಾಜಕೀಯ ಪಕ್ಷಗಳ ಹಂಗು ಇರಬಾರದು ಎನ್ನುವುದನ್ನು ಅಣ್ಣ ಯಾವಾಗಲೂ ಹೇಳುತ್ತಿದ್ದರು. ಆದರೆ ಮೋದಿಜಿ ವಿಷಯ ಬಂದಾಗ ದೇಶದ ವಿಷಯ ನಮ್ಮ ಮುಂದೆ ನಿಲ್ಲುತ್ತದೆ. ಮೋದಿ ಯಾವುದೋ ಪಕ್ಷಕ್ಕೋ ಮೀಸಲಾಗಿರುವವರು ಎನ್ನುವುದನ್ನು ಊಹಿಸುವುದು ಕೂಡ ಸಾಧ್ಯ ಇಲ್ಲ. ಅವರು ಯಾವಾಗಲೂ ಹಿಂದುತ್ವವನ್ನು ಪಾಲಿಸುತ್ತಾರೆ. ಆದರೆ ಎಲ್ಲೂ ಅನ್ಯ ಧರ್ಮವನ್ನು ದೂಷಿಸಿದವರಲ್ಲ. ಅವರೂ ಇತ್ತೀಚಿನ ದಿನಗಳಲ್ಲಿ ಓಲೈಕೆಗೆ ಹೋಗುತ್ತಿದ್ದಾರೋ ಎನ್ನುವ ಅನುಮಾನವೂ ಹೆಚ್ಚಿನವರಲ್ಲಿ ಮೂಡುತ್ತಿದೆ. ಆದರೆ ಮೋದಿಜಿಯನ್ನು ದೂಷಿಸುವ ಬರದಲ್ಲಿ ಹಿಂದೂ ಧರ್ಮ, ಆಚರಣೆಗಳ ಬಗ್ಗೆ ಅವಮಾನ ಮಾಡುತ್ತಿರುವ ಜನರಿಗೆ ಹಿಂದುಗಳು ಎದ್ದು ನಿಂತರೆ ಏನಾಗಬಹುದು ಎನ್ನುವ ಕಲ್ಪನೆ ಕೂಡ ಇರುವ ಹಾಗಿಲ್ಲ. ಮೋದಿಯನ್ನು ಬೈಯುವ ಮಹಾನುಭಾವರು ಮೋದಿ ತರುವ ಪ್ರತಿ ಯೋಜನೆಯಲ್ಲಿ ಹಿಂದುಗಳಿಗಿಂತ ಉಪಯೋಗ ಪಡೆದುಕೊಳ್ಳುವವರೂ ಇವರೇ ಎನ್ನುವುದು ಆಶ್ಚರ್ಯದ ವಿಷಯ. ಇಲ್ಲಿ ಜಾತಿ, ಧರ್ಮಕ್ಕಿಂತ ಮಿಗಿಲಾದದ್ದು ದೇಶ ಎನ್ನುವುದನ್ನು ಮನಗಂಡು, ಅದರ ಅರಿವು ಮುಂದಿನ ಪೀಳಿಗೆ ಮುಟ್ಟುವಂತೆ ಮಾಡಿ ಅವರಿಗೆ ದಾರಿ ದೀಪವಾಗೋಣ.

# ವೈದ್ಯೋನಾರಾಯಣೋ ಹರಿಃ

## ಅಗಸೆ ಬೀಜ




ಸಾವಿರಾರು ವರ್ಷಗಳ ಹಿಂದೆಯೇ ಬಳಕೆಯಲ್ಲಿತ್ತು ಎನ್ನಲಾಗುವ ಅಗಸೆ ಬೀಜಗಳಲ್ಲಿ ಹೇರಳವಾದ ಪೌಷ್ಟಿಕಾಂಶಗಳಿವೆ. ಇದು ಆರೋಗ್ಯಕ್ಕೆ ಹಲವಾರು ಉಪಯೋಗಗಳನ್ನು ನೀಡುತ್ತವೆ. ಅಗಸೆ ಬೀಜದಲ್ಲಿರುವ ಒಮೆಗಾ–3 ಕೊಬ್ಬಿನಾಂಶ ಮತ್ತು ಫೈಬರ್ ಅಂಶದಿಂದಾಗಿ ಆರೋಗ್ಯಕರ ಆಹಾರವಾಗಿ ಗುರುತಿಸಿಕೊಂಡಿದೆ. ಹೃದ್ರೋಗ, ಟೈಪ್ 2 ಮಧುಮೇಹ ಮತ್ತು ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುತ್ತದೆ. ಅಗಸೆ ಬೀಜಗಳಲ್ಲಿ ಲಿಗ್ನಾನ್ ಅಂಶ ಸಮೃದ್ಧವಾಗಿದ್ದು, ಇದು ಈಸ್ಟ್ರೋಜೆನ್ ಮತ್ತು ಉತ್ಕರ್ಷಣ ನಿರೋಧಕ ಗುಣಲಕ್ಷಣಗಳನ್ನು ಹೊಂದಿರುವ ಸಸ್ಯ ಸಂಯುಕ್ತಗಳಾಗಿದ್ದು, ಈ ಸಂಯುಕ್ತಗಳು ವಿವಿಧ ರೀತಿಯ ಕ್ಯಾನ್ಸರ್‌ನ್ನು ಅಭಿವೃದ್ಧಿ ಪಡಿಸುವ ಅಪಾಯವನ್ನು ಕಡಿಮೆ ಮಾಡುತ್ತದೆ.

ಅಗಸೆ ಬೀಜದ ಸೇವನೆಯಿಂದ ಸ್ತನ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ.

ಅಗಸೆ ಬೀಜಗಳು ರಕ್ತದೊತ್ತಡ ನಿಯಂತ್ರಿಸಿ, ಹೈಪರ್ ಟೆನ್ಷನ್‌ನ್ನು ಕಡಿಮೆ ಮಾಡುತ್ತವೆ. ರಕ್ತದಲ್ಲಿ ಸಕ್ಕರೆ ಪ್ರಮಾಣದ ಉತ್ಪಾದನೆಯನ್ನು ನಿಯಂತ್ರಣದಲ್ಲಿರಿಸಿ, ಮಧುಮೇಹವನ್ನು ಹತೋಟಿಗೆ ತರುವಲ್ಲಿ ಅಗಸೆ ಬೀಜಗಳು ಸಹಕಾರಿಯಾಗುತ್ತದೆ.

ಅಗಸೆ ಬೀಜಗಳಲ್ಲಿ ಒಮೆಗಾ–3 ಕೊಬ್ಬಿನಾಮ್ಲಗಳು ಸಮೃದ್ಧವಾಗಿದ್ದು, ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತವೆ.

ತೂಕ ನಷ್ಟ ಮಾಡಿಕೊಳ್ಳುವವರಿಗೆ ಅಗಸೆ ಬೀಜಗಳ ಸೇವನೆ ಸಹಕಾರಿಯಾಗುವುದು.

ಅಗಸೆ ಬೀಜಗಳು ಕರಗಬಲ್ಲ ಮತ್ತು ಕರಗದ ಎರಡೂ ವಿಧದ ಫೈಬರ್ ಅನ್ನು ಹೊಂದಿರುತ್ತವೆ. ಹೀಗಾಗಿ ಜೀರ್ಣಶಕ್ತಿಯನ್ನು ಉತ್ತಮವಾಗಿಸಲು ಅಗಸೆ ಬೀಜಗಳು ಸಹಾಯ ಮಾಡುತ್ತವೆ.

ಅಗಸೆ ಬೀಜಗಳನ್ನು ಸೇವಿಸಿದರೆ ದಿನವಿಡೀ ಸಾಕಷ್ಟು ನೀರು ಅಥವಾ ದ್ರವ ಪದಾರ್ಥವನ್ನು ಸೇವನೆ ಮಾಡಬೇಕಾಗುತ್ತದೆ.

ಕರುಳಿನ ಸಮಸ್ಯೆ ಇರುವವರು ಅಗಸೆ ಬೀಜವನ್ನು ಸೇವಿಸುವುದನ್ನು ತಪ್ಪಿಸುವುದು ಉತ್ತಮ ಎಂದು ಅದ್ಯಯನ ತಿಳಿಸುತ್ತದೆ.

# ಕ್ಷೇತ್ರದರ್ಶನ

ಆವನಿ ಕೋಲಾರ ಜಿಲ್ಲೆಯ ಮುಳುಬಾಗಿಲನಿಂದ ಸುಮಾರು ಹತ್ತು ಮೈಲಿ ದಕ್ಷಿಣಕ್ಕಿರುವ ಒಂದು ಪುಣ್ಯಕ್ಷೇತ್ರ. ಸ್ಥಳೀಯ ನಂಬಿಕೆಗಳ ಪ್ರಕಾರ ಪುರಾಣ ಪ್ರಸಿದ್ಧವಾದ ಅವಂತಿಕಾ ಕ್ಷೇತ್ರವಾದ ವಾಲ್ಮೀಕಿ ಋಷಿಯ ಆಶ್ರಮವಿದ್ದುದು ಈ ಬೆಟ್ಟದಲ್ಲಿಯೇ. ರಾಮ ಲಂಕೆಯನ್ನು ಗೆದ್ದು ಅಯೋಧ್ಯೆಗೆ ಹಿಂತಿರುಗುವಾಗ ಇಲ್ಲಿಗೆ ಬಂದಿದ್ದನಂತೆ. ಸೀತಾದೇವಿ ಗಂಡನಿಂದ ಕಾಡಿಗೆ ಕಳುಹಿಸಲ್ಪಟ್ಟಾಗ ಇಲ್ಲಿ ಬಂದು ತಂಗಿ ಲವಕುಶರಿಗೆ ಜನ್ಮವಿತ್ತಳೆಂದೂ, ಲವಕುಶರು ರಾಮನ ಯಜ್ಞಾಶ್ವವನ್ನು ಕಟ್ಟಿ ರಾಮನೊಡನೆ ಇಲ್ಲಿಯೇ ಯುದ್ಧ ಮಾಡಿದರೆಂದೂ ಐತಿಹ್ಯ. ಈ ಘಟನೆಗಳಿಗೆ ಸಂಬಂಧಪಟ್ಟಂತೆ, ಈ ಸುತ್ತಿನ ಅನೇಕ ತಾಣಗಳು ವಾಲ್ಮೀಕಿಯ ಕುಟೀರ, ಲವಕುಶರ ತೊಟ್ಟಿಲು, ಸೀತೆಯ ಅಡುಗೆಪಾತ್ರೆ, ಅವಳು ಬಟ್ಟೆಯೊಗೆಯುತ್ತಿದ್ದ ಕೊಳ, ಲವಕುಶರು ಯಜ್ಞಾಶ್ವವನ್ನು ಕಟ್ಟಿದ ಬಂಡೆ, ರಾಮ ಲಕ್ಷ್ಮಣರು ಕುಳಿತಿದ್ದ ಬಂಡೆ–ಇತ್ಯಾದಿಯಾಗಿ ಪ್ರಸಿದ್ಧವಾಗಿವೆ. ವಾಲ್ಮೀಕಿ ಬೆಟ್ಟದ ಬುಡದಲ್ಲಿ 9ನೇ ಶತಮಾನಕ್ಕೆ ಸೇರಿದ ರಾಮಲಿಂಗೇಶ್ವರ ದೇವಾಲಯವೆಂದು ಪ್ರಸಿದ್ಧವಾಗಿರುವ ಈ ಸಂಕೀರ್ಣವೇ ಈ ಊರಿಗೆ ಐತಿಹಾಸಿಕ ಹಿನ್ನೆಲೆ ಒದಗಿಸಿದೆ. 10–12 ದೇವಾಲಯಗಳಿರುವ ಈ ಸಮುಚ್ಚಯದ ನಿರ್ಮಾಣ ಕಾಲದ ಬಗ್ಗೆ ನಿಖರತೆ ಇಲ್ಲದಿದ್ದರೂ ನೊಳಂಬರು, ಚೋಳ




ಅವನಿ ಕ್ಷೇತ್ರ

ರು, ಚಾಳುಕ್ಯರು, ಗಂಗರು, ವಿಜಯನಗರದ ಅರಸರಿಂದ ಹಿಡಿದು ಇತ್ತಿಚಿನ ಮೈಸೂರರಸರ ವರೆಗೆ ಎಲ್ಲ ರಾಜ ಮನೆತನಗಳ ಕೆತ್ತನೆ ಶೈಲಿಗಳು ಇಲ್ಲಿವೆ. ದಕ್ಷಿಣಕ್ಕೆ ಹಾಗು ಪೂರ್ವಕ್ಕೆ ಬಾಗಿಲಿದ್ದು ಎತ್ತರದ ಪ್ರಾಕಾರದಿಂದ ಈ ಸಮುಚ್ಚಯ ಸುರಕ್ಷಿತವಾಗಿದೆ. ಮಧ್ಯದಲ್ಲಿ ಪಾರ್ವತಿ ಅಮ್ಮನವರ ದೇವಾಲಯವಿದ್ದು ಅದರ ಪಶ್ಚಿಮಕ್ಕೆ ರಾಮೇಶ್ವರ, ಲಕ್ಷ್ಮಣೇಶ್ವರ ಹಾಗು ಭರತೇಶ್ವರ ದೇವಾಲಯಗಳಿವೆ. ಹಾಗೇ ಪೂರ್ವಕ್ಕೆ ಶತ್ರುಘ್ನೇಶ್ವರ, ಅಂಜನೇಶ್ವರ ಹಾಗು ಚಿಕ್ಕದಾದ ಸುಗ್ರೀವೇಶ್ವರ ಮತ್ತು ಅಂಗದೇಶ್ವರ ದೇವಾಲಯಗಳಿವೆ. ದೇವಾಲಯದ ಮುಖ್ಯ ಪ್ರವೇಶ ದ್ವಾರದಲ್ಲಿ ಎತ್ತರದ ಗರುಡಗಂಬವಿದೆ. ಶತೃಘ್ನೇಶ್ವರ ಹಾಗು ಲಕ್ಷ್ಮಣೇಶ್ವರ ದೇವಾಲಯಗಳ ಗೋಡೆ ಮೇಲೆ ಹಳೆಗನ್ನಡದ ಲಿಪಿ ಇದ್ದು ವೀರನೊಳಂಬ ಕಾಲಕ್ಕೆ ಸೇರಿದ್ದಾಗಿದೆ. ಈ ಶಾಸನದ ಪ್ರಕಾರ ದೇವಬ್ಬರಸಿ ಎಂಬ ಅರಸಿಯೊಬ್ಬಳು "ದೇವಬ್ಬೆ ಸಮುದ್ರ"ವನ್ನು ಹಾಗು ಹೊರವಂಗಲದಲ್ಲಿ ವಿಷ್ಣು ದೇವಾಲಯವನ್ನು ಕಟ್ಟಿಸಿರುವ ಮಾಹಿತಿ ಇದೆ. ಅಲ್ಲದೆ ಈಕೆ ತನ್ನ ಮೊದಲನೇ ಮಗ ವೀರ ಮಹೇಂದ್ರ ನೊಳಂಬಾಧಿರಾಜನ ಸಾವಿನಿಂದ ಕೆಂಗೆಟ್ಟು ತನ್ನ ಎರಡನೇ ಮಗ ಇರವ ನೊಳಂಬನಿಗೆ ಪಟ್ಟ ಕಟ್ಟಿ ಆತನ ಕ್ಷೇಮಾಭಿವೃದ್ಧಿಗೆ "ನೊಳಂಬ ನಾರಾಯಣೇಶ್ವರ" ದೇವಾಲಯವನ್ನು ಕಟ್ಟಿಸಿದಳೆಂದು ತಿಳಿದುಬರುತ್ತದೆ. ಲಕ್ಷ್ಮಣೇಶ್ವರ ದೇವಾಲಯವು ಸಮುಚ್ಚಯದಲ್ಲಿರುವ ಎಲ್ಲ ದೇವಾಲಯಗಳಲ್ಲಿ ತುಂಬ ದೊಡ್ಡದಾಗಿದ್ದು ಅಪೂರ್ವ ಕೆತ್ತನೆಗಳಿಂದ ಕೂಡಿದೆ. ಇಲ್ಲಿನ ಗೋಡೆಗಳ ಮೇಲಿನ ಕುದುರೆ–ಆನೆ ಸಾಲುಗಳ ಕೆತ್ತನೆ, ಯಾಳಿ ಮತ್ತು ಮಕರ ಕೆತ್ತನೆಗಳು ಬಾಣರ ಮತ್ತು ರಾಷ್ಟ್ರಕೂಟರ ಕಾಲದವುಗಳು. ಇದರ ನವರಂಗ ಚೌಕಾಕಾರದ ಸುಂದರ ಕೆತ್ತನೆಯ ಕಂಬಗಳಿಂದ ರಚಿತವಾಗಿದ್ದು ಕಂಬಗಳ ಮೇಲ್ತುದಿಯಲ್ಲಿ ದುಂಡನೆಯ ದೊಡ್ಡ–ದೊಡ್ಡ ಕಲ್ಲಿನ ಗಾಲಿಗಳು ಛಾವಣಿಯನ್ನು ಎತ್ತಿ ನಿಲ್ಲಿಸಿವೆ. ತೆರೆದ ಸುಕನಾಸಿ, ಅಷ್ಟದಿಕ್ಪಾಲಕರಿಂದ ಸುತ್ತುವರಿದ ಉಮಾ–ಮಹೇಶ್ವರರ ಮೋಹಕ ಕೆತ್ತನೆಗಳು ನವರಂಗದ ಮೇಲ್ಛಾವಣಿಯಲ್ಲವೆ. ಗುಡಿಯ ಹೊರಮೈಯ ಸುತ್ತಲೂ ಬುಡದಲ್ಲಿ ಆನೆ, ಸಿಂಹ, ಯಾಳಿ, ಮಕರ, ಕುದುರೆಲಾಳದಾ ಕೃತಿಯ ಕಮಾನುಗಳು–ಇವುಗಳಿಂದ ಅಲಂಕೃತವಾದ ಆರು ಪಟ್ಟಿಕೆಗಳಿವೆ. ಮೇಲೆ ಅಲ್ಲಲ್ಲಿ ಯಕ್ಷ, ಶಿವ, ದುರ್ಗಿ, ಗಣೇಶ, ಭೈರವ, ಭೈರವಿ, ವಿಷ್ಣು ಮುಂತಾದ ಶಿಲ್ಪಗಳಿರುವ, ಸಮಾನಾಂತರಗಳಲ್ಲಿ ಅರ್ಧಕಂಭಗಳಿಂದ ಛೇದಿಸಲ್ಪಟ್ಟ ಎತ್ತರವಾದ ಭಿತ್ತಿಯಿದೆ. ಇದರಲ್ಲಿ ಮಧ್ಯೆ ಮಧ್ಯೆ ಮಹಿಷಾಸುರಮರ್ದಿನಿ, ಸೂರ್ಯ, ನಟರಾಜ ಮುಂತಾದ ವಿಗ್ರಹಗಳನ್ನೊಳಗೊಂಡ ಜಾಲಂಧ್ರಗಳೂ ಇದ್ದು ದೇವಾಲಯದ ಸೊಬಗನ್ನು ಹೆಚ್ಚಿಸಿವೆ. ಒಳಭಾಗದ ನವರಂಗದಲ್ಲಿ, ಮಧ್ಯೆ ಉಮಾಮಹೇಶ್ವರ ಮತ್ತು ಸುತ್ತಲೂ ಅಷ್ಟ ದಿಕ್ಪಾಲಕರ ಕೆತ್ತನೆಯಿರುವ ಒಂದು ಮೋಹಕ ಭುವನೇಶ್ವರಿಯಿದೆ. ಬೆಟ್ಟ ಹತ್ತುವಲ್ಲಿ ಸಿಗುವ ಗುಹೆಯನ್ನು ವಾಲ್ಮೀಕಿಯ ಗುಹೆಯೆಂದು ಕರೆಯುತ್ತಾರೆ. ಇಂತಹ ಪುರಾಣ ಪ್ರಸಿದ್ಧ ಕ್ಷೇತ್ರಕ್ಕೊಮ್ಮೆ ಬೇಟಿ ನೀಡಲು ಮರೆಯದಿರಿ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಮೇಘಾಲಯವು ಈಶಾನ್ಯ ಭಾರತದಲ್ಲಿರುವ ಒಂದು ಸಣ್ಣ ರಾಜ್ಯ. ಮೇಘಾಲಯವು ಪೂರ್ವದಿಂದ ಪಶ್ಚಿಮಕ್ಕೆ 300 ಕಿಲೋಮೀಟರ್ ಹಾಗೂ ಉತ್ತರದಿಂದ ದಕ್ಷಿಣಕ್ಕೆ 100 ಕಿಲೋಮೀಟರ್ ಅಗಲಕ್ಕೆ ವ್ಯಾಪಿಸಿದೆ. ಇದರ ಒಟ್ಟು ವಿಸ್ತೀರ್ಣ 8,700 ಚದರ ಮೈಲ್‌ಗಳು. ರಾಜ್ಯದ ಉತ್ತರ ಭಾಗದಲ್ಲಿ ಆಸ್ಸಾಂ ರಾಜ್ಯ ಹಾಗೂ ದಕ್ಷಿಣ ಭಾಗದಲ್ಲಿ ಬಾಂಗ್ಲಾ ದೇಶವಿದೆ. ಪೂರ್ವದ ಸ್ಕಾಟ್ಲೆಂಡ್ ಎಂದು ಕರೆಯಲಾದ ಶಿಲ್ಲಾಂಗ್, ಮೇಘಾಲಯದ ರಾಜಧಾನಿ. ರಾಜ್ಯದ ಮೂರನೆಯ ಒಂದು ಭಾಗವು ಕಾಡು ಪ್ರದೇಶವಾಗಿದ್ದು, ಇಲ್ಲಿನ ಬೆಟ್ಟ–ಗುಡ್ಡ ಕಾಡುಗಳು, ಉತ್ತರ ಹಾಗೂ ದಕ್ಷಿಣದಲ್ಲಿರುವ ತಗ್ಗು ಪ್ರದೇಶ ಉಷ್ಣವಲಯ ಕಾಡುಗಳಿಗಿಂತಲೂ ಭಿನ್ನವಾಗಿವೆ. ಮೇಘಾಲಯದ ಕಾಡುಗಳು ಸಸ್ತನಿ ಹಾಗೂ ಪಕ್ಷಿವರ್ಗ, ಪ್ರಾಣಿಗಳ ಹಾಗೂ ಸಸ್ಯಗಳ ಜೀವವೈವಿಧ್ಯಕ್ಕೆ ಖ್ಯಾತಿಯಾಗಿದೆ. ಆಸ್ಸಾಂ ರಾಜ್ಯದ ಮೂರು ಜಿಲ್ಲೆಗಳಾದ ಏಕೀಕೃತ ಖಾಸಿ ಹಿಲ್ಸ್, ಜೈನ್ ತಿಯಾಗಳ ಹಿಲ್ಸ್




ಹಾಗೂ ಗಾರೊ ಹಿಲ್ಸ್ ಜಿಲ್ಲೆಗಳನ್ನು ಜನವರಿ 1972ರಲ್ಲಿ ಬೇರ್ಪಡಿಸುವುದರ ಮೂಲಕ ಮೇಘಾಲಯ ರಾಜ್ಯವನ್ನು ಸ್ಥಾಪಿಸಲಾಗಿದೆ. ಪೂರ್ಣಪ್ರಮಾಣದ ರಾಜ್ಯವಾಗುವ ಮುಂಚೆ, ಮೇಘಾಲಯಕ್ಕೆ 1970ರಲ್ಲಿ ಅರೆ–ಸ್ವಾಧಿಕಾರದ ಸ್ಥಿತಿ ನೀಡಲಾಗಿತ್ತು. ಖಾಸಿ, ಗಾರೊ ಮತ್ತು ಜೈನ್ ತಿಯಾ ಬುಟಕಟ್ಟು ಜನಾಂಗಗಳು ತಮ್ಮದೇ ಆದ ಸಾಮ್ರಾಜ್ಯಗಳನ್ನು ಹೊಂದಿದ್ದವು. ಇಸವಿ 1947ರಲ್ಲಿ ಭಾರತ ಸ್ವತಂತ್ರಗೊಂಡಾಗ, ಇಂದಿನ ಮೇಘಾಲಯದಲ್ಲಿ, ಆಸ್ಸಾಂನ ಎರಡು ಜಿಲ್ಲೆಗಳಿದ್ದು, ಅಸ್ಸೋಮ್ ರಾಜ್ಯದೊಳಗೇ ಸೀಮಿತ ಸ್ವಾಯತ್ತತೆ ಪಡೆದಿದ್ದವು. ಅಸ್ಸೋಮ್ ಪುನಸ್ಸಂ ಘಟನಾ ಕಾಯಿದೆ 1969ರಡಿ, ಮೇಘಾಲಯ ರಾಜ್ಯಕ್ಕೆ ಸ್ವಯಮಾಧಿಕಾರ ನೀಡಲಾಯಿತು. ಈ ಕಾಯಿದೆಯು 2 ಏಪ್ರಿಲ್ 1970ರಂದು ಜಾರಿಗೆ ಬಂದಿತು. ಆಸ್ಸಾಂ ರಾಜ್ಯದೊಳಗೆ ಮೇಘಾಲಯ ಸ್ವತಂತ್ರ ರಾಜ್ಯವನ್ನಾಗಿ ಸ್ಥಾಪಿಸಲಾಯಿತು. ಮೇಘಾಲಯದ ಜನಸಂಖ್ಯೆಯಲ್ಲಿ ಬುಡಕಟ್ಟು ಜನಾಂಗದವರದ್ದೇ ಬಹುಪಾಲು ಆಗಿದೆ. ಜೈನ್ ತಿಯಾರು, ಕೊಚ್, ಹಜೋಂಗ್, ದಿಮಾಸಾ, ಹ್ಮಾರ್, ಕುಕಿ, ಲಖರ್, ಮಿಕಿರ್, ರಭಾ ಮತ್ತು ನೇಪಾಳಿ ಸೇರಿದಂತೆ ಇತರೆ ಬುಡಕಟ್ಟು ಗುಂಪುಗಳೂ ಸಹ ಮೇಘಾಲಯದಲ್ಲಿ ವಾಸಿಸುತ್ತವೆ. ಭಾರತದಲ್ಲಿ ಕ್ರಿಶ್ಚಿಯನ್ ಜನಸಂಖ್ಯೆ ಅಧಿಕ ಇರುವ ಮೂರು ರಾಜ್ಯಗಳಲ್ಲಿ ಮೇಘಾಲಯವವೂ ಒಂದು. ಇಲ್ಲಿನ ಜನಸಂಖ್ಯೆಯ 70.3% ರಷ್ಟು ಕ್ರಿಶ್ಚಿಯನ್ ಧರ್ಮದವರಾಗಿದ್ದಾರೆ. ಈ ವಲಯದಲ್ಲಿ ಹಿಂದೂ ಧರ್ಮದವರು ಎರಡನೆಯ ಅತಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಖಾಸಿ ಮತ್ತು ಗಾರೊ ಮೇಘಾಲಯದಲ್ಲಿನ ಪ್ರಮುಖ ಭಾಷೆಗಳಾಗಿವೆ. ಖಾಸಿ ಭಾಷೆ ತನ್ನ ಆರಂಭಿಕ ದಿನಗಳಿಂದಲೂ ತನ್ನದೇ ಆದ ಅಕ್ಷರಲಿಪಿ ಹೊಂದಿರಲಿಲ್ಲ. ಮೊನ್‌ಖ್ಮೆರ್ ಕುಟುಂಬದಲ್ಲಿ ಭಾರತದಲ್ಲಿ ಉಳಿದಿರುವ ಕೆಲವೇ ಭಾಷೆಗಳಲ್ಲಿ ಖಾಸಿ ಭಾಷೆ ಸಹ ಒಂದು. ಗಾರೊ ಭಾಷೆ ಬೊಡೊ ಭಾಷೆಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಮೇಘಾಲಯದಲ್ಲಿರುವ ಬುಡಕಟ್ಟು ಜನಸಂಖ್ಯೆಯಲ್ಲಿ ಬಹಳಷ್ಟು ಜನರು ಮಾತೃ ಪ್ರಧಾನ ಸಂಸ್ಕೃತಿ ವ್ಯವಸ್ಥೆಯನ್ನು ಅನುಸರಿಸುತ್ತಾರೆ. ಇದರಂತೆ, ವಂಶ ಮತ್ತು ಅನುವಂಶೀಯತೆಗಳನ್ನು ಮಹಿಳೆಯರ ಮೂಲಕ ಗುರುತಿಸಲಾಗುತ್ತದೆ. ಖಾಸಿ ಮತ್ತು ಜೈನ್ ತಿಯಾ ಬುಡಕಟ್ಟು ಜನಾಂಗದವರು ಸಾಂಪ್ರದಾಯಿಕ ಮ್ಯಾಟ್ರಿಲೈ ನಿಯಲ್ ವ್ಯವಸ್ಥೆಯನ್ನು ಅನುಸರಿಸುತ್ತಾರೆ. ಇದರಲ್ಲಿ ಅತಿ ಕಿರಿಯ ಮಗಳು ಎಲ್ಲಾ ಸ್ವತ್ತಿನ ವಾರಸುದಾರಳಾಗುತ್ತಾಳೆ, ವೃದ್ಧಾಪ್ಯ ತಲುಪಿರುವ ಹೆತ್ತವರ ಮತ್ತು ವಿವಾಹವಾಗಿಲ್ಲದ ಸಹೋದರ–ಸಹೋದರಿಯರ ಪಾಲನೆ ಮಾಡುತ್ತಾಳೆ. ಆದ್ದರಿಂದ ಮೇಘಾಲಯದ ಬುಡಕಟ್ಟು ಜನಾಂಗದವರು ವಿಶ್ವದಲ್ಲೇ ಅತಿದೊಡ್ಡ ಮ್ಯಾಟ್ರಿಲೈನಿಯಲ್ ಸಂಸ್ಕೃತಿಯ ಅಂಗವಾಗಿದ್ದಾರೆ. ಪುರಾತನ ಕಥೆಗಳ ಪ್ರಕಾರ, 13ನೆಯ ಶತಮಾನದಲ್ಲಿ, ರಾಣೀ ಸಿಂಗಾ ಅಳ್ವಿಕೆಯಲ್ಲಿ, 'ಹತಕೇಶ್ವರತ್' ಎನ್ನಲಾದ ಶಿವಲಿಂಗವು ಹಿಲ್ಸ್‌ನಲ್ಲಿದೆಯೆಂಬುದು ಜೈನ್ ತಿಯಾಗಳ ನಂಬಿಕೆ. ಜೈನ್ ತಿಯಾಗಳ ಬುಡಕಟ್ಟು ಜನಾಂಗವು ಶಿವರಾತ್ರಿ ಎಂಬ ಹಿಂದೂ ಹಬ್ಬಗಳಲ್ಲಿ ಭಾಗವಹಿಸುತ್ತಾರೆ. ಗುಹೆಗಳಲ್ಲಿ ಶಿವ ಹಾಗೂ ದುರ್ಗಾವಿಗ್ರಹಗಳು ಕಾಣ ಸಿಗುತ್ತವೆ. ಮೇಘಾಲಯ ರಾಜ್ಯವನ್ನು 'ಮೇಘಾಲಯ ಪ್ರಸ್ಥಭೂಮಿ'ಯೆಂದೂ ಕರೆಯಲಾಗುತ್ತದೆ. ಇದರಲ್ಲಿ ಬಹುಪಾಲು ಆರ್ಷೇಯ ಕಲ್ಪದ ಶಿಲಾ ಬಂಡೆಗಳ ರೂಪಗಳಿವೆ. ಈ ಶಿಲಾರೂಪಗಳು ಇದ್ದಿಲು, ಸುಣ್ಣಕಲ್ಲು, ಯುರೆನಿಯಮ್ ಹಾಗೂ ಸಿಲಿಮನೈಟ್‌ನಂತಹ ಅಮೂಲ್ಯ ಖನಿಜಗಳ ಸಮೃದ್ಧ ನಿಕ್ಷೇಪಗಳನ್ನು ಹೊಂದಿರುತ್ತವೆ. ಮೇಘಾಲಯದಲ್ಲಿ ಹಲವು ನದಿಗಳಿವೆ. ಡೇರಿಂಗ್, ಸಾಂಡಾ, ಬಾಂದ್ರಾ, ಭೋಗೈ, ಡಾರೆಂಗ್, ಸಿಂಸಾಂಗ್, ನಿತೈ ಹಾಗೂ ಭೂಪೈಗಳು ಗಾರೊ ಹಿಲ್ಸ್ ವಲಯದ ಪ್ರಮುಖ ನದಿಗಳು.

# ಕಲ್ಪವೃಕ್ಷ

@ಪ್ರೀತಂ ರೈ ಇ

## ಮೇಜರ್ ರಿಷಿ ದೇವ್ ವತ್ಸ

ಪಾಕಿಸ್ಥಾನವು ಜೆ & ಕೆ ನಲ್ಲಿರುವ ಅಖ್ನೂರ್ ಎಂಬ ಪ್ರಮುಖ ಪಟ್ಟಣವನ್ನು ವಶಪಡಿಸಿಕೊಳ್ಳುವ ಗುರಿಯೊಂದಿಗೆ "ಆಪರೇಷನ್ ಗ್ರ್ಯಾಂಡ್ ಸ್ಲ್ಯಾಮ್" ಅನ್ನು ಪ್ರಾರಂಭಿಸಿದ ನಂತರ, ಭಾರತೀಯ ಸೇನೆಯು ಯುದ್ಧದ ರಂಗಭೂಮಿಯನ್ನು ಪಾಕಿಸ್ಥಾನದ ಪಂಜಾಬ್ ಪ್ರದೇಶಕ್ಕೆ ಸ್ಥಳಾಂತರಿಸಲು ನಿರ್ಧರಿಸಿತು. 3 ಲೆಫ್ಟಿನೆಂಟ್ ಕರ್ನಲ್ ಡೆಸ್ಮಂಡ್ ಹೇಡ್ ನೇತೃತ್ವದಲ್ಲಿ ಜಾಟ್ ಅವರು 06 ಸೆಪ್ಟೆಂಬರ್ 1965 ರಂದು ಮೊದಲ ಬಾರಿಗೆ ಅಂತರರಾಷ್ಟ್ರೀಯ ಗಡಿಯನ್ನು ದಾಟಿದರು. 3 ಜಾಟ್‌ನ ಎರಡು ಕಂಪನಿಗಳು ವೇಳೆಗೆ ಡೋಗ್ರಾಯ್ ಎಂಬ ಕುಗ್ರಾಮವನ್ನು ದಾಳಿಯಲ್ಲಿ ವಶಪಡಿಸಿಕೊಂಡವು. ಆದಾಗ್ಯೂ, ಅಸಮರ್ಪಕ ಫಾಲೋ–ಆನ್ ಬೆಂಬಲ ಮತ್ತು ಏರ್ ಕವರ್ ಕಾರಣ, ಕಂಪನಿಗಳು ಹಿಂತೆಗೆದುಕೊಂಡು, ಡೋಗ್ರೈಯಿಂದ 9 ಕಿಮೀ ದೂರದಲ್ಲಿರುವ ಸಂತಪುರಕ್ಕೆ ಹಿಂತಿರುಗಬೇಕಾಯಿತು. 21/22 ರ ರಾತ್ರಿ ಡೋಗ್ರಾಯ್ ಮೇಲೆ ಎರಡನೇ ದಾಳಿಯನ್ನು ಪ್ರಾರಂಭಿಸಲು ಘಟಕವು ಸಂತಪುರದಲ್ಲಿ ಇನ್ನೂ ಹದಿನೈದು ದಿನ ಕಾಯಬೇಕಾಯಿತು. ಮೇಜರ್ ಆರ್‌ಡಿ ವತ್ಸ ಅವರು ಬೆಟಾಲಿಯನ್‌ನ ರೈಫಲ್ ಕಂಪನಿಗಳಿಗೆ ಕಮಾಂಡರ್ ಆಗಿದ್ದರು. ಡೋಗ್ರಾಯ್ ಮೇಲಿನ ಎರಡನೇ ದಾಳಿಯ ತಯಾರಿಯಲ್ಲಿ 54 ಪದಾತಿ ದಳವು ಎರಡು ಹಂತಗಳಲ್ಲಿ ದಾಳಿಯನ್ನು ಯೋಜಿಸಿತು. 13 ಪಂಜಾಬ್‌ಗೆ ಡೋಗ್ರಾಯ್‌ನ ಪೂರ್ವಕ್ಕೆ ಶತ್ರುಗಳ ರಕ್ಷಣೆಯನ್ನು ಅತಿಕ್ರಮಿಸಲು ಮತ್ತು ಮೊದಲ ಹಂತದಲ್ಲಿ ಗ್ರ್ಯಾಂಡ್ ಟ್ರಂಕ್ ರಸ್ತೆಯಲ್ಲಿ ಮೈಲ್ 13 ಅನ್ನು ಸುರಕ್ಷಿತವಾಗಿರಿಸಲು ತಿಳಿಸಲಾಯಿತು. ಒಮ್ಮೆ 13 ಮೈಲಿಯನ್ನು ಪಡೆದುಕೊಂಡ ನಂತರ 3 ಜಾಟ್ ಎರಡನೇ ಹಂತದಲ್ಲಿ ಡೋಗ್ರೈ ಮೇಲೆ ದಾಳಿ ಮಾಡಬೇಕಾಗಿತ್ತು. ಮೈಲ್ 13 ಅನ್ನು ಸುರಕ್ಷಿತವಾಗಿರಿಸಲು ಸಾಧ್ಯವಾಗಲಿಲ್ಲ ಆದರೆ 3 ಜಾಟ್ ದಾಳಿಯೊಂದಿಗೆ ಮುನ್ನಡೆ




ದರು. ಸೆ.22 ರಂದು ಮುಂಜಾನೆ 01. 40 ಗಂಟೆಗೆ ದಾಳಿಯನ್ನು ಪ್ರಾರಂಭಿಸಲಾಗಿದ್ದು, ಬೆಟಾಲಿಯನ್‌ನ ಎಲ್ಲಾ ಕಂಪನಿಗಳು ಏಕಕಾಲದಲ್ಲಿ ದಾಳಿ ನಡೆಸಿ, ಆಗಾಗ ಗುಂಡಿನ ಚಕಮಕಿ ಮುಂದುವರಿದರೂ ಡೋಗ್ರೈಯನ್ನು ಮುಂಜಾನೆ 3 ಗಂಟೆಗೆ ಸೆರೆಹಿಡಿಯಲಾಯಿತು. ಬೆಟಾಲಿಯನ್‌ನ ಅಔ ಲೆಫ್ಟಿನೆಂಟ್ ಕರ್ನಲ್ ಹೇಡೆ ಅವರು ಕಷ್ಟಪಟ್ಟು ಗಳಿಸಿದ ವಿಜಯಕ್ಕಾಗಿ ಅಭಿನಂದಿಸಲು ಮೇಜ್ ವತ್ಸಾ ಅವರನ್ನು 03.30 ಗಂಟೆಗೆ ಭೇಟಿಯಾದರು. ಡೋಗ್ರಾಯ್‌ನ ನಷ್ಟದಿಂದ ಶತ್ರುಗಳು ಜರ್ಜರಿತರಾದರಾದರೂ, 06.30 ಗಂಟೆಗೆ ಬಲವಾದ ಪ್ರತಿದಾಳಿಯನ್ನು ಪ್ರಾರಂಭಿಸಿದರು. ಈ ದಾಳಿಯ ಸಮಯದಲ್ಲಿ, ಮೇಜ್ ವತ್ಸಾ ಅವರು 200 ಪೌಂಡ್ ತೂಕದ ಶೆಲ್ನಿಂದ ನೇರವಾದ ದಾಳಿಗೊಳಗಾಗಿ ಹುತಾತ್ಮರಾದರು. ಮೇಜರ್ ಆರ್‌ಡಿ ವತ್ಸಾ ಅವರು ತಮ್ಮ ಅಲ್ಪಾವಧಿಯ ಸೇವೆಯ ಎರಡೂವರೆ ವರ್ಷಗಳಲ್ಲಿ ಅತ್ಯಂತ ಉನ್ನತ ಮಟ್ಟದ ಫೀಲ್ಡ್ ಕ್ರಾಫ್ಟ್ ಕೌಶಲಗಳೊಂದಿಗೆ ಸಮರ್ಪಿತ ಮತ್ತು ಯುದ್ಧ–ಗಟ್ಟಿಯಾದ ಸೈನಿಕನಾಗಿ ಅಭಿವೃದ್ಧಿ ಹೊಂದಿದ್ದರು. ಅತ್ಯುತ್ತಮ ಧೈರ್ಯ, ದೃಢತೆ ಮತ್ತು ಹೋರಾಟದ ಮನೋಭಾವವನ್ನು ಪ್ರದರ್ಶಿಸಿದ ಅವರು ಭಾರತೀಯ ಸೇನೆಯ ಅತ್ಯುನ್ನತ ಸಂಪ್ರದಾಯಗಳನ್ನು ಅನುಸರಿಸಿ ರಾಷ್ಟ್ರದ ಸೇವೆಯಲ್ಲಿ ತಮ್ಮ 23 ನೇ ವಯಸ್ಸಿನಲ್ಲಿ ತಮ್ಮ ಪ್ರಾಣವನ್ನು ಅರ್ಪಿಸಿದರು. ಮೇಜ್ ರಿಷಿ ದೇವ್ ವತ್ಸ ಅವರು ಪಂಜಾಬ್‌ನ ಹೋಶಿಯಾರ್‌ಪುರ ಜಿಲ್ಲೆಯಲ್ಲಿ 04 ಮೇ 1942 ರಂದು ಶ್ರೀ ಜಿತೇಂದ್ರ ನಾಥ್ ಅವರ ಮಗನಾಗಿ ಜನಿಸಿದರು. ಮೇಜ್ ವತ್ಸಾ ಅವರ ಇತರ ಸಹೋದರರಲ್ಲಿ ಸಿ.ಕೆ.ವತ್ಸ, ಬಿ.ಕೆ. ವತ್ಸ, ಆರ್.ಸಿ.ವತ್ಸಾ ಮತ್ತು ಎಸ್.ಪಿ.ವತ್ಸಾ ಸೇರಿದ್ದಾರೆ. ಅವರು ದಾವ್ ಹೈಸ್ಕೂಲ್ ಹೋಶಿಯಾರ್‌ಪುರದಿಂದ ತಮ್ಮ ಶಾಲಾ ಶಿಕ್ಷಣವನ್ನು ಮಾಡಿದರು ಮತ್ತು 1957 ರಲ್ಲಿ ಮೆಟ್ರಿಕ್ ಅನ್ನು ಪೂರ್ಣಗೊಳಿಸಿದರು. ತನ್ನ ಶಿಕ್ಷಣವನ್ನು ಪೂರ್ಣಗೊಳಿಸಿದ ನಂತರ ಅವರು ಸೈನ್ಯಕ್ಕೆ ಸೇರಿದರು. ಜಾಟ್ ರೆಜಿಮೆಂಟ್‌ನ 3 ಜಾಟ್ ಬೆಟಾಲಿಯನ್‌ಗೆ ನಿಯೋಜಿಸಲ್ಪಟ್ಟರು, ಅವರು ಡಿಸೆಂಬರ್ 1962 ರಲ್ಲಿ ಸಿಕ್ಕಿಂನಲ್ಲಿ ತಮ್ಮ ಘಟಕವನ್ನು ಸೇರಿದರು. ಇವರಿಗೆ ಕರಾವಳಿ ತರಂಗಿಣಿಯ ಹೆಮ್ಮೆಯ ಸಲ್ಯೂಟ್.

# ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಜೀವನದಲ್ಲಿ ಸಾಧನೆ ಮಾಡಬೇಕೆಂದು ಮನಸ್ಸು ಮಾಡಿದರೆ, ಅದರಲ್ಲೂ ಆ ಹೆಣ್ಣಿಗೆ ತನ್ನವರ ಬೆಂಬಲ ಸಿಕ್ಕಾಗ ಏನು ಬೇಕಾದರೂ ಸಾಧಿಸಬಲ್ಲಳು ಎನ್ನುವುದನ್ನು ಈಗಾಗಲೇ ಹಲವಾರು ಹೆಣ್ಣು ಮಕ್ಕಳು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಅತಿಥಿ ಭಾರತದ ಮೊದಲ ಎಂ.ಎ ಪದವಿಧರೆ "ಚಂದ್ರಮುಖಿ ಬಸು". ಚಂದ್ರಮುಖಿ ಬಸು 1860 ರಲ್ಲಿ ಡೆಹ್ರಾಡೂನ್‌ನಲ್ಲಿ ಭುವನ್ ಮೋಹನ್ ಬಸು ಅವರ ಮಗಳಾಗಿ ಜನಿಸಿದರು. ಚಂದ್ರಮುಖಿ ಬಸು ಅವರು 1880 ರಲ್ಲಿ ಡೆಹ್ರಾಡೂನ್ ಸ್ಥಳೀಯ ಕ್ರಿಶ್ಚಿಯನ್ ಶಾಲೆಯಿಂದ ಪ್ರಥಮ ಕಲಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆ ಸಮಯದಲ್ಲಿ ಅವರು ಬೆಥೂನ್ ಶಾಲೆಯನ್ನು ಪ್ರವೇಶಿಸಲು ಬಯಸಿದ್ದರು. ಆದರೆ ಸೇರಿಸಿಕೊಳ್ಳಲಿಲ್ಲ. ನಂತರ ಅವರು ರೆವರೆಂಡ್ ಅಲೆಕ್ಸಾಂಡರ್ ಡಫ್ಸ್ ಫ್ರೀ ಚರ್ಚ್ ಇನ್ಸ್ಟಿಟ್ಯೂಷನ್‌ನಲ್ಲಿ ಪ್ರಥಮ ಕಲೆ ಮಟ್ಟದಲ್ಲಿ ಪ್ರವೇಶ ಪಡೆಯಬೇಕಾಯಿತು. 1876 ರಲ್ಲಿ, ಲಿಂಗದ ಬಗೆಗಿನ ತಾರತಮ್ಯದ ಅಧಿಕೃತ ನಿಲುವುಗಳ ಕಾರಣ, ಆಕೆಗೆ ಈಂ ಪರೀಕ್ಷೆಗೆ ಹಾಜರಾಗಲು ವಿಶೇಷ ಅನುಮತಿಯನ್ನು ನೀಡಬೇಕಾಯಿತು. ಆ ವರ್ಷ ಪರೀಕ್ಷೆಗೆ ಹಾಜರಾದ ಏಕೈಕ ಹುಡುಗಿಯಾಗಿ, ಅವರು ಮೊದಲ ರ್‍ಯಾಂಕ್ ಪಡೆದಿದ್ದರು. ಆದರೆ ಅವರ ಫಲಿತಾಂಶಗಳನ್ನು ಪ್ರಕಟಿಸಬಹುದೇ ಎಂದು ನಿರ್ಧರಿಸಲು ವಿಶ್ವವಿದ್ಯಾಲಯವು ಹಲವಾರು ಸಭೆಗಳನ್ನು ನಡೆಸಬೇಕಾಗಿತ್ತು. ಕದಂಬಿನಿ ಗಂಗೂಲಿಯವರಿಗೆ ಮೊದಲು ಚಂದ್ರಮುಖಿ ಬಸು ಅವರು ಈಗಾಗಲೇ 1876 ರಲ್ಲಿ ತಮ್ಮ ಪ್ರವೇಶ ಪರೀಕ್ಷೆಯನ್ನು ಉತ್ತೀರ್ಣರಾಗಿದ್ದರು. ಆದಾಗ್ಯೂ ವಿಶ್ವವಿದ್ಯಾನಿಲಯವು ಅವರನ್ನು ಯಶಸ್ವಿ ಅಭ್ಯರ್ಥಿಯಾಗಿ ಸೇರಿಸಿ ಕೊಳ್ಳಲು ನಿರಾ




ಕರಿಸಿತು. 1878 ರಲ್ಲಿ ವಿಶ್ವವಿದ್ಯಾನಿಲಯದ ಬದಲಾದ ನಿರ್ಣಯವು ಆಕೆಗೆ ಹೆಚ್ಚಿನ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟಿತು. ಅವರು ತನ್ನ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ, ಅವರು ಪದವಿ ಕೋರ್ಸ್‌ಗಾಗಿ ಕದಂಬಿನಿ ಗಂಗೂಲಿಯೊಂದಿಗೆ ಬೆಥೂನ್ ಕಾಲೇಜಿಗೆ ತೆರಳಿದರು. ಅವರ ಪದವಿಯ ನಂತರ, 1884 ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯ ಮತ್ತು ಬ್ರಿಟಿಷ್ ಸಾಮ್ರಾಜ್ಯದಿಂದ ಒಂ ಉತ್ತೀರ್ಣರಾದ ಏಕೈಕ ಮತ್ತು ಮೊದಲ ಮಹಿಳೆಯಾದ ಹೆಗ್ಗಳಿಕೆ ಇವರದು. ಅವರು 1886 ರಲ್ಲಿ ಬೆಥೂನ್ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. 1888ರಲ್ಲಿ ಕಾಲೇಜನ್ನು ಶಾಲೆಯಿಂದ ಬೇರ್ಪಡಿಸಲಾಯಿತು. ಆಗ ಅವರು ಪ್ರಾಂಶುಪಾಲರಾದರು, ಹೀಗಾಗಿ ಪದವಿ ಪೂರ್ವ ಶಿಕ್ಷಣದ ಮೊದಲ ಮಹಿಳಾ ಮುಖ್ಯಸ್ಥರಾದರು. ಅನಾರೋಗ್ಯದ ಕಾರಣ ಅವರು 1891 ರಲ್ಲಿ ನಿವೃತ್ತರಾದರು ಮತ್ತು ಡೆಹ್ರಾಡೂನ್‌ನಲ್ಲಿ ತಮ್ಮ ಉಳಿದ ಜೀವನವನ್ನು ಕಳೆದರು. ಇವರಿಗೆ ಇಬ್ಬರು ಸಹೋದರಿಯರಾದ ಬಿಂಧುಮುಖಿ ಮತ್ತು ಬಿಂದುಬಾಸಿನಿ ಕೂಡ ಪ್ರಸಿದ್ಧರಾಗಿದ್ದರು. ಬಿಂದುಮುಖಿ ಬಸು ಮತ್ತು ವರ್ಜಿನಿಯಾ ಮೇರಿ ಮಿತ್ರರು, 1890 ರಲ್ಲಿ ಪದವಿ ಪಡೆದರು. ಕಲ್ಕತ್ತಾ ವೈದ್ಯಕೀಯ ಕಾಲೇಜಿನಿಂದ ಆರಂಭಿಕ ಮಹಿಳಾ ವೈದ್ಯಕೀಯ ಪದವೀಧರರಲ್ಲಿ ಒಬ್ಬರು. ನಂತರ ಬಿಂದುಬಾಸಿನಿ ಬಸು 1891 ರಲ್ಲಿ ಕಲ್ಕತ್ತಾ ವೈದ್ಯಕೀಯ ಕಾಲೇಜಿನಿಂದ ಪದವಿ ಪಡೆದರು. ಚಂದ್ರಮುಖಿ ಬಸು ಅವರ ಪತಿ ಪಂಡಿತ್ ಕೇಶ್ವರಾನಂದ ಮಾಮಗೇನ್. ಶಿಕ್ಷಣ ತಜ್ಞೆಯಾದ ಬಸು ಅವರು ಫೆಬ್ರವರಿ ಮೂರು 1944 ರಂದು ಮರಣ ಹೊಂದಿದರು. ದೇಶದ ಮೊದಲ ಮಹಿಳಾ ಎಂ.ಎ ಪಧವಿಧರೆಯನ್ನು ಕರಾವಳಿ ತರಂಗಿಣಿ ನೆನಪಿಸಿಕೊಳ್ಳುತ್ತಿದೆ.

## ಭೂಮಿ ಸಕ್ರಮಗೊಳಿಸದೆ ವಿರಮಿಸೆನು: ಶಾಸಕ ಅಶೋಕ್ ರೈ

ಒಂದನೇ ಪುಟದಿಂದ......

ಸಂಸದರಲ್ಲಿ, ಶಾಸಕರಲ್ಲಿ ಧಾರ್ಮಿಕ ಸಂಸ್ಥೆಗಳ ಭೂಮಿಯನ್ನು ಅದರದ್ದೆ ಹೆಸರಿಗೆ ಮಾಡಿಸುವ ಬಗ್ಗೆ ಸರಕಾರದಿಂದ ಆಡಳಿತಾತ್ಮಕ ಕ್ರಮವನ್ನು ಕೈಗೊಳ್ಳಬೇಕೆಂದು ವಿನಂತಿಸುತ್ತಾ ಬಂದಿದ್ದೆ. ಆದರೆ ಅಂದಿನ ಎಲ್ಲಾ ನಾಯಕರಿಗೆ ಹಿಂದುತ್ವದ ಹೆಸರಿನಲ್ಲಿ ಮತಗಳು ಬೇಕಿತ್ತೇ ವಿನಹ ಯಾರಿಗೂ ಹಿಂದೂಗಳ ಬೇಡಿಕೆಗೆ ಸ್ಪಂದಿಸುವ ಇಚ್ಛಾ ಶಕ್ತಿ ಇರಲಿಲ್ಲ. ಈ ಕಾರಣಕ್ಕಾಗಿ ಸರಕಾರ ತಮ್ಮದಿದ್ದರೂ ಹಿಂದೂ ಶ್ರದ್ಧಾ ಕೇಂದ್ರಗಳಾದ ಭಜನಾ ಮಂದಿರ, ದೇವಸ್ಥಾನ, ದೈವಸ್ಥಾನಗಳ ಭೂಮಿಯನ್ನು ಆಯಾಯಾ ಧರ್ಮ ಕೇಂದ್ರಗಳ ಹೆಸರಿಗೆ ಮಂಜೂರುಗೊಳಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಪರಿಣಾಮವಾಗಿ ಹಿಂದೂ ಧಾರ್ಮಿಕ ಕೇಂದ್ರಗಳಿಗೆ ಸರಕಾರ ಆರ್ಥಿಕ ಸಹಕಾರ ನೀಡಿದರೂ, ಅದನ್ನು ಪಡೆಯಬೇಕಾದರೆ, ಭೂ ದಾಖಲೆಗಳೇ ಇಲ್ಲದೇ ಇರುವುದರಿಂದ ಸರಕಾರದ ಅನುದಾನ ದೊರಕದ ಸ್ಥಿತಿ ನಿರ್ಮಾಣವಾಗಿದೆಎಂದರು.

## ರಾಜ್ಯದ ಆರ್ಥಿಕ ಸ್ಥಿತಿ ಸದೃಢ– ಪರಮೇಶ್ವರ್

ಒಂದನೇ ಪುಟದಿಂದ......

ಎಷ್ಟಿದೆ ಎಂದು ಗೊತ್ತಾಗುತ್ತೆ. ಬಿಜೆಪಿ, ಜೆಡಿಎಸ್ ಅವರಿಗೆ ನಮ್ಮ ಆಡಳಿತ ಸಹಿಸಲು ಆಗುತ್ತಿಲ್ಲ. ಹಾಗಾಗಿ ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ" ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಟೀಕಿಸಿದರು. ಜನರು ರಾಜ್ಯದಲ್ಲಿ ನಮಗೆ ಅಧಿಕಾರ ಕೊಟ್ಟಿದ್ದಾರೆ. ನಾವು ಚುನಾವಣೆಗೂ ಮುನ್ನ ಪ್ರಣಾಳಿಕೆಯಲ್ಲಿ ಬಡತನ ನಿರ್ಮೂಲನೆಗೆ ಐದು ಗ್ಯಾರಂಟಿಗಳನ್ನು ನೀಡಿದ್ದೆವು. ನಮ್ಮ ಗ್ಯಾರಂಟಿಯನ್ನುಅನುಷ್ಠಾನ ಮಾಡಲು ಆಗಲ್ಲ ಎಂದು ಹೇಳ್ತಾ ಇದ್ರು. ನಾವು ಅಧಿಕಾರಕ್ಕೆ ಬಂದ ತಕ್ಷಣ ಐದು ಗ್ಯಾರಂಟಿಗಳನ್ನು ಅನುಷ್ಠಾನ ಮಾಡಿದ್ದೇವೆ. ಬಜೆಟ್‌ನಲ್ಲಿ ಗ್ಯಾರಂಟಿಗಾಗಿ ಹಣ ಮೀಸಲಿಟ್ಟಿದ್ದೇವೆ. ಗೃಹಲಕ್ಷ್ಮಿ ಯೋಜನೆಯಿಂದ ಲ್ಯಾಪ್‌ಟಾಪ್, ವಾಶಿಂಗ್ ಮಿಷನ್‌ಎಲ್ಲಾ ತೆಗೆದುಕೊಂಡಿದ್ದಾರೆ. ಈ ಯೋಜನೆಗಳು ಜನರಿಗೆ ತಲುಪುತ್ತಿವೆ. ಆದರೆ ಜೆಡಿಎಸ್, ಬಿಜೆಪಿಯವರು ನಮ್ಮ ಗ್ಯಾರಂಟಿ ಬಗ್ಗೆ ಟಿಪ್ಪಣಿ ಮಾಡಿದ್ದಾರೆ" ಜನರು ಆಕ್ರೋಶ ವ್ಯಕ್ತಪಡಿಸುತ್ತಿಲ್ಲ. ಎಲ್ಲಾ ಗ್ಯಾರಂಟಿ ತಗೊಂಡು ಜನರು ಚೆನ್ನಾಗಿದ್ದಾರೆ. ಬಿಜೆಪಿ, ಜೆಡಿಎಸ್ ಅವರು ಪ್ರತ್ಯೇಕ ಪ್ರತಿಭಟನೆ ಮಾಡ್ತಾ ಇದ್ದಾರೆ. ಇದನ್ನು ನೋಡಿದ್ರೆ ಇಬ್ಬರಲ್ಲೂ ಬಿರುಕು ಬಿಟ್ಟಿದೆ ಎನಿಸುತ್ತಿದೆ" ಎಂದು ಅನುಮಾನ ವ್ಯಕ್ತಪಡಿಸಿದರು.

## ರಾಜ್ಯದಲ್ಲಿ ಹಿಂದೂಗಳಿಗೆ ಅಪಮಾನ–ಬಿ ವೈ ವಿ

ಒಂದನೇ ಪುಟದಿಂದ......

ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು. ಸಿದ್ದರಾಮಯ್ಯ ಮುಖ್ಯಮಂತ್ರಿ ಆದ ಮೇಲೆ ಐವತ್ತಕ್ಕೂ ಅಧಿಕ ವಸ್ತುಗಳ ಬೆಲೆ ಏರಿಕೆ ಅಗಿದೆ. ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿ ಅಲ್ಲ, ಕಾಂಗ್ರೆಸ್ ಮುಖ್ಯಮಂತ್ರಿ. ಇಂಥಹ ಹಿಂದೂ ವಿರೋಧಿ ಸರ್ಕಾರವನ್ನು ಬಿಜೆಪಿ ಕಾರ್ಯಕರ್ತರು ಖಂಡಿತಾ ಕಿತ್ತು ಹಾಕುತ್ತಾರೆ ಎಂದರು. ಕರ್ನಾಟಕದಲ್ಲಿ ಜನ ವಿರೋಧಿ ಮತ್ತು ಬಡವರ ವಿರೋದಿ ಕಾಂಗ್ರೆಸ್ ಸರ್ಕಾರವಿದೆ. ರಾಜ್ಯದ ಮುಖ್ಯಮಂತ್ರಿಯಾದ ಮೇಲೆ ಎಷ್ಟು ಬಾರಿ ಮಂಗಳೂರಿಗೆ ಭೇಟಿಕೊಟ್ರು, ಎಷ್ಟು ಅನುದಾನ ಕೊಟ್ರು ಎಂದು ಪ್ರಶ್ನಿಸಿದರು. ಯಡಿಯೂರಪ್ಪ ಸಿಎಂ ಆಗಿದ್ದಾಗದ. ಕಜಿಲ್ಲೆಗೆ 19,500 ಕೋಟಿ ರೂ. ಅನುದಾನಕೊಟ್ಟಿದ್ದಾರೆ. ದ.ಕಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಇಲ್ಲವೇ? ಸ್ಪೀಕರ್ ಒಬ್ಬರು ಇದ್ದಾರೆ, ನಮ್ಮ ಶಾಸಕರು ಪ್ರತಿಭಟನೆ ಮಾಡಿದರೆ ಅಮಾನತು ಮಾಡ್ತಾರೆ. ಕಾನೂನು ಬಾಹಿರವಾಗಿ ನಮ್ಮನ್ನು ಹೊರಗಡೆ ಓಡಿಸಿದ್ದಾರೆ ಎಂದು ವಿಜಯೇಂದ್ರ ಹೇಳಿದರು. ಇದೇ ಸಂದರ್ಭದಲ್ಲಿ ಶ್ರೀರಾಮುಲು ಮಾತನಾಡಿ, ಬಿಜೆಪಿ ಸರಕಾರವಿದ್ದಾಗ ಹಿಂದೂ ಕಾರ್ಯಕರ್ತರ ಕೇಸ್ ತೆಗೆದು ಹಾಕಲಾಗಲಿಲ್ಲ. ಆದರೆ ಕಾಂಗ್ರೆಸ್ ತಮ್ಮ ಸರಕಾರ ಬಂದಾಗ ಅವರ ಕಾರ್ಯಕರ್ತರ ಕೇಸ್ ತೆಗೆದು ಹಾಕಿದೆ. ಆದ್ದರಿಂದ ನಮ್ಮ ಸರ್ಕಾರ ಮುಂದೆ ಬಂದಾಗ ಹಿಂದೂ ಕಾರ್ಯಕರ್ತರ ಎಲ್ಲ ಕೇಸ್ ತೆಗೆದು ಹಾಕಬೇಕು ಎಂದು ಆಗ್ರಹಿಸಿದರು.

## ಪದವೀಧರರಿಗೆ ತರಬೇತಿಗೆ ಅರ್ಜಿ ಆಹ್ವಾನ

ಮಡಿಕೇರಿ–2024–25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ (176)ರಲ್ಲಿ ಘೋಷಿಸಿರುವಂತೆ ಸರ್ಕಾರದ ಆದೇಶ ಮತ್ತು ತಿದ್ದುಪಡಿ ಆದೇಶದನ್ವಯ ಐಐಎಸ್‌ಸಿ, ಐಐಟಿ ಮತ್ತು ಎನ್‌ಐಟಿ ಸಂಸ್ಥೆಯ ಮೂಲಕ ಆರ್ಟಿಫೀಸಿಯಲ್ ಇಂಟಲಿಜೆನ್ಸ್ ಮತ್ತು ಮೆಷಿನ್ ಲರ್ನಿಂಗ್ ಮುಂತಾದ ವೃತ್ತಿಪರ ತರಬೇತಿ ಕೋರ್ಸ್‌ಗಳಲ್ಲಿ ಭಾಗವಹಿಸುವ ಪ.ಪಂ.ದ 200 ಎಂಜಿನಿಯರಿಂಗ್ ಪದವೀಧರರಿಗೆ ತರಬೇತಿ ನೀಡುವ ಬಗ್ಗೆ ಅರ್ಜಿ ಆಹ್ವಾನಿಸಲಾಗಿದೆ.

## ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸಲು ಅರ್ಜಿ ಆಹ್ವಾನ

ಮಡಿಕೇರಿ–ಪ್ರಸಕ್ತ (2025–26) ಸಾಲಿಗೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಪರಿಶಿಷ್ಟ ಜಾತಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಕೊಡಗು ಜಿಲೆ, ಮಡಿಕೇರಿ ದೂ. ಸಂ. 9480843037, ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಮಡಿಕೇರಿ 9480843155, ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಸೋಮವಾರಪೇಟೆ 9480843156 ಹಾಗೂ ಸಹಾಯಕ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಪೊನ್ನಂಪೇಟೆ ದೂ.ಸಂ. 9480843157ನ್ನು ಸಂಪರ್ಕಿಸ ಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶೇಖರ್ ತಿಳಿಸಿದ್ದಾರೆ.

## ಜಾನುವಾರುಗಳಿಗೆ ವಿಮಾ ಸೌಲಭ್ಯ ಯೋಜನೆ

ಮಂಗಳೂರು – ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರುಗಳಿಗೆ ವಿಮಾ ಸೌಲಭ್ಯ ನೀಡುವ ಯೋಜನೆ ಇರುತ್ತದೆ. ಜಾನುವಾರುವಿನ ವಿಮೆಯ ವಂತಿಗೆ ಶೇ.85ನ್ನು ಸಹಾಯಧನ ರೂಪದಲ್ಲಿ ಸರ್ಕಾರದಿಂದ ಭರಿಸಲಾಗುತ್ತದೆ. ಜಾನುವಾರುಗಳ ಅನಿರೀಕ್ಷಿತ ಸಾವಿನಿಂದ ಎದುರಾಗುವ ಆರ್ಥಿಕ ಸಂಕಷ್ಟವನ್ನು ಎದುರಿಸಲು ಎಲ್ಲಾ ರೈತಬಾಂಧವರು ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಸ್ಥಳೀಯ ಪಶುವೈದ್ಯರನ್ನು ಸಂಪರ್ಕಿಸುವಂತೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಮಾಜ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಆಹ್ವಾನ

ಮಂಗಳೂರು – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಖಿ ಒನ್ ಸ್ಟಾಪ್ ಸೆಂಟರ್‌ಗೆ ಗುತ್ತಿಗೆ ಆಧಾರದ ಮೇರೆಗೆ ಸಮಾಜ ಕಾರ್ಯಕರ್ತೆ ಒಂದು ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಎಪ್ರಿಲ್ 15 ರೊಳಗೆ ಸೂಕ್ತ ದಾಖಲೆಗಳೊಂದಿಗೆ ನಗರದ ಬಿಜೈ ಮಸ್ಕಾಂ ಬಳಿ ಇರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯ ಸರಕಾರಿ ನೌಕರರಿಗೆ ಸರ್ವೋತ್ತಮ ಪ್ರಶಸ್ತಿ : ಅರ್ಜಿ ಆಹ್ವಾನ

ಮಂಗಳೂರು–2024 ಮತ್ತು 2025ನೇ ಸಾಲಿನಲ್ಲಿ ಸರ್ಕಾರಿ ಅಧಿಕಾರಿ/ನೌಕರರಿಗೆ ಅತ್ಯುತ್ತಮ ಸೇವೆ ಸಲ್ಲಿಸಿದ ಸರ್ಕಾರಿ ಅಧಿಕಾರಿ/ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿಗೆ ನಾಮನಿರ್ದೇಶನವನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಜಾಲತಾಣ https://dparar. karnataka.gov.in/ https://sarvothamaawards.karnataka.gov.in ಹಾಗೂ ಸಹಾಯಕ ಆಯುಕ್ತರು ಮಂಗಳೂರು ಉಪ ವಿಭಾಗ ಇವರ ಕಛೇರಿಗೆ ಕೂಡ ದ್ವಿಪ್ರತಿಯಲ್ಲಿ ಸಲ್ಲಿಸಲು ಮಂಗಳೂರು ಉಪವಿಭಾಗಾಧಿಕಾರಿಗಳ ಪ್ರಕಟಣೆ ತಿಳಿಸಿದೆ.

## ಸ್ಪಿಂಕ್ಲರ್ ಸೆಟ್ ಪಡೆಯಲು ಅರ್ಜಿ ಆಹ್ವಾನ

ಶಿವಮೊಗ್ಗ : ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಿಶೇಷ ಕೇಂದ್ರೀಯ ನೆರವಿನಡಿ ಶಿವಮೊಗ್ಗ ಜಿಲ್ಲೆಯ ಪರಿಶಿಷ್ಟ ಪಂಗಡದವರಿಗೆ ಸ್ಪಿಂಕ್ಲರ್ ಸೆಟ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಯನ್ನು ಸಮಾಜ ಕಲ್ಯಾಣ ಇಲಾಖೆಯ ತಾಲ್ಲೂಕು ಸಹಾಯಕ ನಿರ್ದೇಶಕ ಕಚೇರಿಯಲ್ಲಿ ಪಡೆದು, ಭರ್ತಿಮಾಡಿದ ಅರ್ಜಿಯನ್ನು ದಾಖಲಾತಿಗಳೊಂದಿಗೆ ಮೇ 08ರೊಳಗೆ ಸಲ್ಲಿಸುವಂತೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎನ್.ಜೆ.ಶ್ರೀನಿವಾಸ್ ತಿಳಿಸಿದ್ದಾರೆ.

## ಅರ್ಹತಾ ಪರೀಕ್ಷೆಗೆ ಅರ್ಜಿ ಆಹ್ವಾನ

ಶಿವಮೊಗ್ಗ : ಸಮಾಜ ಕಲ್ಯಾಣ ಇಲಾಖೆಯ 2025–26ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಪ್ರತಿಷ್ಠಿತ ಶಾಲೆಗಳಿಗೆ ಅರ್ಹತಾ ಪರೀಕ್ಷೆಯ ಮೂಲಕ 6ನೇ ತರಗತಿಗೆ 35 ಸ್ಥಾನಗಳಿಗೆ ದಾಖಲಿಸಿಕೊಳ್ಳಲು ಅರ್ಜಿ ಆಹ್ವಾನಿಸಿದೆ. ಆಸಕ್ತರು ನಿಗದಿತ ನಮೂನೆ ಅರ್ಜಿಯನ್ನು ಉಪನಿರ್ದೇಶಕರು, ತಾಲೂಕು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖಾ ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಮೇ 03ರೊಳಗಾಗಿ ಸಲ್ಲಿಸುವಂತೆ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ದೂ.ಸಂ.08182–249241ನ್ನು ಹಾಗೂ ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿಸಂಪರ್ಕಿಸಬಹುದು.

## ಇಬ್ಬರು ನಕ್ಸಲರು ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರು




ಬೆಳ್ತಂಗಡಿ : ತಾಲೂಕಿನಲ್ಲಿ ದಾಖಲಾದ ಮೂರು ನಕ್ಸಲ್ ಚಟುವಟಿಕೆ ಪ್ರಕರಣಗಳಿಗೆ ಸಂಬಂಧಿಸಿ ಇಬ್ಬರು ನಕ್ಸಲ್ ನಾಯಕರನ್ನು ಬೆಳ್ತಂಗಡಿ ಪೊಲೀಸರು ಕೇರಳ ಜೈಲಿನಿಂದ ಬಾಡಿ ವಾರೆಂಟ್ ಮೂಲಕ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಬೆಳ್ತಂಗಡಿ ಪೊಲೀಸರು ಅವರಿಬ್ಬರನ್ನು ಮೂರು ದಿನಗಳ ಕಾಲ ಕಸ್ಟಡಿಗೆ ಪಡೆದು ಮೂರು ಪ್ರಕರಣಗಳಿಗೆ ಸಂಬಂಧಿಸಿ ತನಿಖೆ ನಡೆಸಲಿದ್ದಾರೆ. ಮೋಸ್ಟ್ ವಾಟೆಂಡ್ ನಕ್ಸಲ್ ನಾಯಕರಾದ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ನಿವಾಸಿ ನಕ್ಸಲ್ ಪಶ್ಚಿಮ ಘಟ್ಟದ ವಿಶೇಷ ಸಮಿತಿಯ ಕಾರ್ಯದರ್ಶಿಯಾಗಿದ್ದ ಬಿ.ಜಿ.ಕೃಷ್ಣಮೂರ್ತಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕಳಸ ನಿವಾಸಿ ಸಾವಿತ್ರಿಯನ್ನು 2021ರ ನವೆಂಬರ್ 8ರಂದು ಕೇರಳ ರಾಜ್ಯದ ಪೊಲೀಸರು ಬಂಧಿಸಿದ್ದರು. ಬಳಿಕ ಅವರನ್ನು ತ್ರಿಶೂರ್ ಜೈಲಿನಡಿಲಾಗಿತ್ತು. ಬಿ.ಜಿ.ಕೃಷ್ಣ ಮೂರ್ತಿ ವಿರುದ್ಧ ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ 53 ಪ್ರಕರಣಗಳು ಹಾಗೂ ಸಾವಿತ್ರಿ ವಿರುದ್ಧ 22 ಪ್ರಕರಣಗಳು ತನಿಖೆಯಲ್ಲಿವೆ.

## ನವಮಂಗಳೂರು ಬಂದರಿಗೆ ಐಷಾರಾಮಿ ಪ್ರವಾಸಿ ಹಡಗು

ಮಂಗಳೂರು : ಐಷಾರಾಮಿ ಪ್ರವಾಸಿ ಹಡಗು ಎಂಎಸ್ ನಾರ್ವೇಜಿಯನ್ ಸ್ಕೈ ಪಣಂಬೂರಿನ ನವಮಂಗಳೂರು ಬಂದರಿಗೆ ಶನಿವಾರ ಆಗಮಿಸಿದೆ. ಇದು ನವಮಂಗಳೂರು ಬಂದರಿಗೆ ಪ್ರಸಕ್ತ ಸಾಲಿನಲ್ಲಿ ಆಗಮಿಸಿದ ಐದನೇ ಹಡಗು ಆಗಿದೆ. ಕೆರಬ್ಬೀಯನ್ ದೇಶ ಬಹಾಮಾಸ್ ಫ್ಲಾಗ್‌ನೊಂದಿಗೆ ಸಂಚರಿಸುವ ಈ ಐಷಾರಾಮಿ ಹಡಗಿನಲ್ಲಿ 1,876 ಪ್ರಯಾಣಿಕರು ಮತ್ತು 861 ಸಿಬ್ಬಂದಿ ಇದ್ದಾರೆ. ಕೋವಿಡ್ ಬಳಿಕ ಹಡಗಿನಲ್ಲಿ ಮಂಗಳೂರಿಗೆ ಆಗಮಿಸಿದ ಅತಿ ಹೆಚ್ಚು ಪ್ರಯಾಣಿಕರ ಸಂಖ್ಯೆ ಇದಾಗಿದೆ. ಬಂದರಿನ 4ನೇ ಬರ್ತ್‌ನಲ್ಲಿ ನಿಂತಿರುವ 258.6 ಮೀಟರ್ ಉದ್ದದ ಕ್ರೂಸ್ ಕೊಚ್ಚಿನ್ ಬಂದರಿನಿಂದ ಆಗಮಿಸಿತ್ತು. ಎನ್‌ಎಂಪಿಎ ಉಪಾಧ್ಯಕ್ಷೆ ಎಸ್.ಶಾಂತಿ ಮತ್ತು ಎಂಆರ್‌ಪಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ಶ್ಯಾಮಪ್ರಸಾದ್ ಕಾಮತ್ ಅವರು ಶಿಪ್




ಮಾಸ್ಟರ್ ಅವರನ್ನು ಸ್ಮರಣಿಕೆಯೊಂದಿಗೆ ಸ್ವಾಗತಿಸಿದರು. ಕ್ರೂಸ್ ಲಾಂಜ್‌ನಲ್ಲಿ ಯಕ್ಷಗಾನ ಮತ್ತು ಭರತನಾಟ್ಯ ಪ್ರದರ್ಶನಗಳೊಂದಿಗೆ ಕ್ರೂಸ್ ಪ್ರಯಾಣಿಕರಿಗೆ ಭವ್ಯ ಸಾಂಪ್ರದಾಯಿಕ ಸ್ವಾಗತವನ್ನು ನೀಡಲಾಯಿತು. ಒಟ್ಟು 977 ಪ್ರಯಾಣಿಕರು ಕಾರ್ಕದ ಗೋಮಟೇಶ್ವರ, 1000 ಕಂಬದ ಬಸದಿ, ಸೋನ್ಸ್ ಫಾರ್ಮ್, ಕದ್ರಿ ಮತ್ತು ಗೋಕರ್ಣನಾಥ ದೇವಾಲಯಗಳು ಮತ್ತು ಸ್ಥಳೀಯ ಮಾರುಕಟ್ಟೆಗಳಿಗೆ ಭೇಟಿ ಸಂದರ್ಶಿಸಿದರು.

## ಅಡಿಕೆಗಳ ಆಮದು ತಡೆಗೆ ಕೇಂದ್ರ ಸರಕಾರದ ಕ್ರಮ



ಮಂಗಳೂರು: ವಿದೇಶಿ ವ್ಯಾಪಾರ ನಿರ್ದೇಶನಾಲಯ (ಡಿಜಿಎಫ್‌ಟಿ)ದ ಐಟಿಸಿ (ಎಚ್‌ಎಸ್) ಕೋಡ್ 20081920 ಅಡಿಯಲ್ಲಿ ಪರಿಗಣಿತವಾಗಿದ್ದ ಹುರಿದ ಅಡಿಕೆಯ ಅನಿರ್ಬಂಧಿತ ವ್ಯಾಪಾರವನ್ನು ರದ್ದು ಗೊಳಿಸುವ ಮೂಲಕ 'ರೋಸ್ಟೆಡ್ ನಟ್ಸ್ ಆಂಡ್ ಸೀಡ್ಸ್' ಹೆಸರಲ್ಲಿ ಆಮದಾಗುತ್ತಿದ್ದ ಅಡಿಕೆಗೆ ನಿರ್ಬಂಧ ಹೇರಿರುವ ಕೇಂದ್ರ ಸರಕಾರದ ಕ್ರಮವನ್ನು ಕ್ಯಾಂಪ್ಕೊ ಶ್ಲಾಘಿಸಿದೆ. ಎ.4ರಂದು ಕೇಂದ್ರ ಸರಕಾರದ ವಾಣಿಜ್ಯ ಇಲಾಖೆಯು ಈ ಸಂಬಂಧ ಅಧಿಸೂಚನೆಯನ್ನು ಹೊರಡಿಸಿದ್ದು, ಅದರ ಪ್ರಕಾರ ಐಟಿಸಿ (ಎಚ್‌ಎಸ್) ಕೋಡ್ 08028090 ಮತ್ತು 20081920 ಅಡಿಯಲ್ಲಿ ಬರುವ 'ಹುರಿದ ಅಡಿಕೆ"ಯನ್ನು ' ಬರುವುದಕ್ಕೆ ನಿಷೇಧ ವಿಧಿಸಲಾಗಿದೆ. ಆದಾಗ್ಯೂ, ಕನಿಷ್ಠ ಆಮದು ದರವನ್ನು ಪ್ರತಿ ಕೆಜಿಗೆ ರೂ.351 ನಿಗದಿಪಡಿಸಿದ್ದು, ಆಮದು ಮಾಡಲ್ಪಡುವ ಅಡಿಕೆಯ ವೆಚ್ಚ, ವಿಮೆ ಮತ್ತು ಸರಕು ಸಾಗಣೆ (ಸಿಐಎಫ್) ಮೌಲ್ಯವು ಪ್ರತಿ ಕಿಲೋಗ್ರಾಂಗೆ ರೂ. 351 ಮತ್ತು ಅದಕ್ಕಿಂತ ಹೆಚ್ಚಿದ್ದರೆ, ಶೇ 100 ರಫ್ತು ಆಧಾರಿತ ಘಟಕಗಳು, ಎಸ್‌ಇಝೆಡ್‌ನಲ್ಲಿರುವ ಘಟಕಗಳು ಮತ್ತು ಮುಂಗಡ ಅಧಿಕಾರ ಯೋಜನೆಯಡಿಯಲ್ಲಿ ಆಮದು ಮಾಡಿಕೊಳ್ಳುವ ಅಡಿಕೆಗೆ ಎಂಐಎಫ್ ಷರತ್ತುಗಳು ಅನ್ವಯವಾಗುವುದಿಲ್ಲ. ಈ ಸಂಖ್ಯೆಯಡಿಯಲ್ಲಿ ಎಲ್ಲಾ ರೀತಿಯ ಸಂಸ್ಕರಿತ ಅಡಿಕೆಯನ್ನು ಸೇರಿಸಲಾಗಿದ್ದು, ಈಗ ಹುರಿದ ಅಡಿಕೆಯು ಸಹ ಸೇರ್ಪಡೆಗೊಂಡಿದೆ.

## ಎ.20ರೊಳಗೆ ದ.ಕ. ಜಿಲ್ಲಾಧಿಕಾರಿ ನೂತನ ಕಚೇರಿ ಪೂರ್ಣ

ಮಂಗಳೂರು : ನಗರದ ಪಡೀಲ್‌ನಲ್ಲಿ ಜಿಲ್ಲಾಧಿಕಾರಿಯ ನೂತನ ಕಚೇರಿ ಸಂಕೀರ್ಣದ ನಿರ್ಮಾಣ ಕಾರ್ಯ ಎಪ್ರಿಲ್ 20ರೊಳಗೆ ಪೂರ್ಣಗೊಳ್ಳಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣವನ್ನು ಉದ್ಘಾಟಿಸಲಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಜಿಲ್ಲಾಧಿಕಾರಿಯ ನೂತನ ಕಚೇರಿ ಸಂಕೀರ್ಣದ ಕಾಮಗಾರಿಯನ್ನು ಸಚಿವರು ಪರಿಶೀಲಿಸಿದರು. ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿವೆ. ಕಾಮಗಾರಿಯನ್ನು ಎ.20ರೊಳಗೆ ಪೂರ್ಣ ಗೊಳಿಸುವಂತೆ



ಸೂಚಿಸಲಾಗಿದೆ ಎಂದು ಹೇಳಿದರು. ಉದ್ಘಾಟನಾ ಸಮಾರಂಭಕ್ಕೆ ಒಂದು ದಿನ ನಿಗದಿಪಡಿಸುವಂತೆ ನಾವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿನಂತಿಸಿದ್ದೇವೆ. ಡಿಸಿ ಕಚೇರಿ ಸಂಕೀರ್ಣದ ಉದ್ಘಾಟನೆಯ ಜೊತೆಗೆ, ಸಿಎಂ ಒಳಾಂಗಣ ಕ್ರೀಡಾಂಗಣ ಮತ್ತು ಇತರ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟಿಸಲಿದ್ದಾರೆ ಎಂದು ಸಚಿವ ಗುಂಡೂರಾವ್ ಹೇಳಿದರು.

## ಬ್ರಹ್ಮಾವರಕ್ಕೆ ಸರ್ವಿಸ್ ರಸ್ತೆ, ಫ್ಲೈಓವರ್ : ಜಿಲ್ಲಾಧಿಕಾರಿ ಸೂಚನೆ




ಉಡುಪಿ: ಬ್ರಹ್ಮಾವರದ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಫ್ಲೈಓವರ್ ನಿರ್ಮಾಣ ಅನಿವಾರ್ಯವಾಗಿದ್ದು, ಇದಕ್ಕಾಗಿ ಅಂದಾಜುಪಟ್ಟಿಯನ್ನು ತಯಾರಿಸುವಂತೆ ಸೂಚನೆ ನೀಡಲಾಗಿದ್ದು, ತಕ್ಷಣಕ್ಕೆ ಮಹೇಶ್ ಆಸ್ಪತ್ರೆ ಯಿಂದ ಎಸ್‌ಎಂಎಸ್ ವಿದ್ಯಾಸಂಸ್ಥೆಯವರೆಗೆ ಎರಡೂ ಕಡೆಗಳಲ್ಲಿ ಸರ್ವಿಸ್ ರಸ್ತೆಯನ್ನು ನಿರ್ಮಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿದ್ಯಾಕುಮಾರಿ ಅವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆಗಳನ್ನು ನೀಡಿದ್ದಾರೆ. ಮಣಿಪಾಲದಲ್ಲಿ ಜಿಲ್ಲಾ ಪಂಚಾಯತ್‌ನ ಡಾ.ವಿ. ಎಸ್. ಆಚಾರ್ಯ ಸಭಾಂಗಣದಲ್ಲಿ ರಾಷ್ಟ್ರೀಯ ಹೆದ್ದಾರಿ–66ರಲ್ಲಿ ಬ್ರಹ್ಮಾವರದ ಆಕಾಶವಾಣಿ ಜಂಕ್ಷನ್‌ನಿಂದ ಎಸ್‌ಎಂಎಸ್ ಪದವಿ ಪೂರ್ವ ಕಾಲೇಜುವರೆಗೆ ಫ್ಲೈ ಓವರ್ ಅಥವಾ ಅಂಡರ್‌ಪಾಸ್ ನಿರ್ಮಿಸುವ ಕುರಿತು ಹಾಗೂ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದ ಕುಂದುಕೊರತೆಗಳ ಕುರಿತು ಚರ್ಚಿಸುವ ಸಲುವಾಗಿ ಆಯೋಜಿಸಲಾದ ಸಭೆಯಲ್ಲಿ ಅವರು ಅಧಿಕಾರಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದರು.

## ಖಾಸಗಿ ಬಸ್‌ಗಳ ಟಿಕೆಟ್ ದರ ಏರಿಕೆ ಕೈ ಬಿಡಲು ಆಗ್ರಹ

ಉಡುಪಿ : ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇತ್ತೀಚೆಗೆ ಟೋಲ್ ದರ, ಮೆಟ್ರೋ ದರ, ಡೀಸೆಲ್ ದರ ಹೆಚ್ಚಳ ಹಾಗೂ ಕೆಲವು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿದ್ದು ಜನಸಾಮಾನ್ಯರು ತತ್ತರಿಸಿ ಹೋಗಿದ್ದಾರೆ. ಅದರ ಮಧ್ಯೆ ಡೀಸೆಲ್ ದರ, ಟೋಲ್ ದರ ನೆಪದಲ್ಲಿ ಖಾಸಗಿ ಬಸ್ ದರ ಏರಿಕೆ ಮಾಡು ತ್ತಿರುವುದು ಖಂಡನೀಯ. ಈ ಕೂಡಲೇ ಟಿಕೆಟ್ ದರ ಹೆಚ್ಚಳ ಕುರಿತು ನಿರ್ಧಾರವನ್ನು ಕೈ ಬಿಡಬೇಕು ಎಂದು ಸೆಂಟರ್ ಆಫ್ ಇಂಡಿಯಾನ್ ಟ್ರೇಡ್ ಯೂನಿಯನ್(ಸಿಐಟಿಯು) ಆಗ್ರಹಿಸಿದೆ. ಪ್ರತಿ ಬಾರಿಯೂ ಡೀಸೆಲ್ ಬೆಲೆ ಏರಿಕೆ ಯಾಗುವ ಸಂಧರ್ಭದಲ್ಲಿ ಖಾಸಗಿ ಬಸ್ ಮಾಲೀಕರು ಕೇಂದ್ರ ಮತ್ತು ರಾಜ್ಯ ಸರಕಾರದ ವಿರುದ್ಧ



ಮಾತಾನಾಡದೇ ಜನಸಾಮಾನ್ಯರ, ವಿದ್ಯಾರ್ಥಿಗಳ, ಕಾರ್ಮಿಕರ ಜೇಬಿಗೆ ಕತ್ತರಿ ಹಾಕುವುದು ಸರಿಯಲ್ಲ ಈಗಾಗಲೇ ಸರಕಾರಗಳ ದ್ವಂದ್ವ ನೀತಿಗಳಿಂದ ಜನ ಸಾಮಾನ್ಯರು, ಕಾರ್ಮಿಕರು, ಮಧ್ಯಮ ವರ್ಗದ ಜನರು ಕಷ್ಟಪಡುತ್ತಿದ್ದಾರೆ ಎಂದು ಸಿಐಟಿಯು ಉಡುಪಿಯ ಸಂಚಾಲಕ ಕವಿರಾಜ್ ಎಸ್.ಕಾಂಚನ್ ಹೇಳಿದರು.

## ಮೈಕ್ರೋ ವಿಮಾನ ವಿಭಾಗದಲ್ಲಿ ಎಸ್‌ಜೆಇಸಿ ಏರೋ ತಂಡ ಪ್ರಥಮ



ಮಂಗಳೂರು: ಎಸ್‌ಜೆಇಸಿ ಏರೋ ಎಂಬುದು ಸಂತ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಏರೋ ಮಾಡೆಲಿಂಗ್ ಕ್ಲಬ್ ಆಗಿದ್ದು, ಮಾನವರಹಿತ ವೈಮಾನಿಕ ವಾಹನಗಳಿಗೆ (ಆರ್.ಸಿ ವಿಮಾನಗಳು ಮತ್ತು ಡ್ರೋನ್‌ಗಳು) ಸಂಬಂಧಿಸಿದಂತೆ ವಾಯುಯಾನ ಕ್ಷೇತ್ರದಲ್ಲಿ ನಾವೀನ್ಯತೆಯನ್ನು ಸೃಷ್ಟಿಸುವ ಗುರಿಯೊಂದಿಗೆ ಸ್ಥಾಪಿಸಲಾಗಿದ್ದು, ಮಾರ್ಚ್ 28ರಿಂದ 30ರವರೆಗೆ ತಮಿಳುನಾಡಿನ ಕರ್ಪಗ ವಿನಾಯಕ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ನಡೆದ ಎಸ್.ಎ.ಇ.ಐ. ಎಸ್.ಎಸ್ ಡ್ರೋನ್ ಡೆವಲಪ್‌ಮೆಂಟ್ ಚಾಲೆಂಜ್ 2025ರಲ್ಲಿ ಎಸ್‌ಜೆಇಸಿ ಏರೋ ತಂಡವು 'ಮೈಕ್ರೋ ಏರ್‌ಕ್ರಾಫ್ಟ್' ವಿಭಾಗದಲ್ಲಿ ಭಾರತದಾದ್ಯಂತ ವಿವಿಧ ವಿಭಾಗದಲ್ಲಿ 80ಕ್ಕೂ ಅಧಿಕ ತಂಡಗಳೊಂದಿಗೆ ಸ್ಪರ್ಧಿಸಿ, ಅಸಾಧಾರಣ ಏರೋನಾಟಿಕಲ್ ಎಂಜಿನಿಯರಿಂಗ್ ಕೌಶಲ್ಯಗಳನ್ನು ಪ್ರದರ್ಶಿಸಿ. ಪ್ರಥಮ ಸ್ಥಾನಗಳಿಸಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿರುವುದು ಸಂತಸ ತಂದಿದೆ ಎಂದು ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶು ಪಾಲರಾದ ಡಾ. ರಿಯೋ ಡಿ ಸೋಜಾ ತಿಳಿಸಿದರು.

## ಮಂಗಳೂರಿನಿಂದ ರೈಲ್ವೆ ಮತ್ತು ವಿಮಾನ ಪ್ರವಾಸ ಪ್ಯಾಕೇಜ್

ಮಂಗಳೂರು: ಮಂಗಳೂರಿನಿಂದ ರೈಲು ಮತ್ತು ವಿಮಾನ ಪ್ರವಾಸ ಪ್ಯಾಕೇಜ್‌ಗಳನ್ನು ಪರಿಚಯಿಯತ್ತಿದೆ ಎಂದು ಇಂಡಿಯನ್ ರೈಲ್ವೆ ಕ್ಯಾಟರಿಂಗ್ ಆಂಗ್ ಟೂರಿಸಂ ಕಾರ್ಪೊರೇಷನ್ ಲಿಮಿಟೆಡ್ (IRCTC) joint general manager ಸ್ಯಾಮ್ ಜೋಸೆಫ್ ತಿಳಿಸಿದರು. ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ಭಾರತ ಸರ್ಕಾರದ ರೈಲ್ವೆ ಸಚಿವಾಲಯದ ಅಡಿಯಲ್ಲಿರುವ ಕೇಂದ್ರ ಸಾರ್ವಜನಿಕ ವಲಯದ ಉದ್ಯಮವಾಗಿದೆ. ನಿಲ್ದಾಣಗಳಲ್ಲಿ ರೈಲುಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಆಡುಗೆ ಮತ್ತು ಅತಿಥ್ಯ ಸೇವೆಗಳನ್ನು ಮೇಲ್ದರ್ಜೆಗೇರಿಸಲು, ವೃತ್ತಿಪರಗೊಳಿಸಲು ಮತ್ತು ನಿರ್ವಹಿಸಲು ಮತ್ತು ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಐಆರ್‌ಟಿಸಿಯನ್ನು ಭಾರತೀಯ ರೈಲ್ವೆಯ ವಿಶ್ವತ ಅಂಗವಾಗಿ ಸ್ಥಾಪಿಸಲಾಗಿದೆ.




ಕೈಗೆಟುಕುವ ದರದಲ್ಲಿ ದೇಶೀಯ ಮತ್ತು ಅಂತರಾಷ್ಟ್ರೀಯ ಪ್ರವಾಸಗಳನ್ನು ಆಯೋಜಿಸುವಲ್ಲಿ ಮುಂಚೂಣಿಯಲ್ಲಿರುವ ಐಆರ್ ಟಿಸಿ ಹಲವು ವರ್ಷಗಳಿಂದ ಹಲವಾರು ವಿರಾಮ ಮತ್ತು ತೀರ್ಥಯಾತ್ರೆ ಪ್ರವಾಸ ಪ್ಯಾಕೇಜ್ ಗಳನ್ನು ಸಂಗ್ರಹಿಸಿ, ರಾಷ್ಟ್ರವ್ಯಾಪಿ ಪ್ರೋತ್ಸಾಹವನ್ನು ನೀಡಿ ಐಆರ್ ಟಿಸಿಯ ಪ್ರಯಾಣ ಸೇವೆಗಳಿಗೆ ಪ್ರವೇಶವನ್ನು ಹೆಚ್ಚಿಸಲು, ಮಂಗಳೂರು ಕೇಂದ್ರ ರೈಲ್ವೆ ನಿಲ್ದಾಣದಲ್ಲಿ ಪ್ರವಾಸೋದ್ಯಮ ಮಾಹಿತಿ ಮತ್ತು ಸೌಲಭ್ಯ ಕೇಂದ್ರವನ್ನು ಪ್ರಾರಂಭಿಸಲಾಗಿದೆ ಎಂದು ಮಾಹಿತಿ ನೀಡಿದರು.

## "ಮುತ್ತಿನ ಮಹಲ್" ಇನ್ನು ಮುಂದೆ ನೆನಪು!



ಮಂಗಳೂರು: ಆರು ದಶಕಗಳ ಕಾಲ ಮಂಗಳೂರಿನ ಹೃದಯ ಭಾಗಗದಲ್ಲಿ ಮಿಂಚುತ್ತಿದ್ದ "ಮೋತಿ ಮಹಲ್ ಹೋಟೆಲ್" ಬಾಗಿಲು ಮುಚ್ಚಲು ಸಜ್ಜಾಗುತ್ತಿರುವ ಸುದ್ದಿ ಮಂಗಳೂರಿಗರ ಬೇಸರ ತರಿಸಿದೆ. ನಗರದ ಅತಿಥಿ ಸತ್ಕಾರದ ಇತಿಹಾಸದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದ ಈ ಹೋಟೆಲ್ ಇನ್ನು ನೆನಪು ಮಾತ್ರವಾಗಲಿದೆ. ಮೋತಿಮಹಲ್‌ನ ಹೋಟೆಲಿನ ಮಾಲಕರಿಗೆ ಹಾಗೂ ಅದರ ಜಮೀನಿನ ಮೂಲ ಮಾಲೀಕರಿಗೆ ಕಳೆದ ಹಲವು ದಶಕಗಳಿಂದ ನಡೆಯುತ್ತಿದ್ದ ಸಿವಿಲ್ ವ್ಯಾಜ್ಯದ ತೀರ್ಪು ಸುಪ್ರೀಂಕೋರ್ಟ್‌ನಲ್ಲಿ ಹೊರ ಬಿದ್ದಿದ್ದು, ತೀರ್ಪಿನ ಪ್ರಕಾರ, ಮೋತಿಮಹಲ್ ಅನ್ನು ಏಪ್ರಿಲ್ ಅಂತ್ಯದೊಳಗೆ ಅದರ ಜಮೀನಿನ ಮಾಲೀಕರಿಗೆ ಹಿಂದಿರುಗಿಸಬೇಕಾಗಿದ್ದು, ಜೊತೆಗೆ 3 ಕೋಟಿ ರೂಪಾಯಿಗಳ ಪರಿಹಾರವನ್ನು ನೀಡಬೇಕಾಗಿದೆ. ಈ ಮೂಲಕ ದಶಕಗಳಿಂದ ನಡೆಯುತ್ತಿದ್ದ ಕಾನೂನು ಹೋರಾಟಕ್ಕೆ ಅಂಕದ ಪರದೆ ಬಿದ್ದಿದೆ. ಉದ್ಯಮಿ ಎ.ಜೆ. ಶೆಟ್ಟಿಯವರ ದೂರದೃಷ್ಟಿಯ ಫಲವಾಗಿ 1966ರಲ್ಲಿ ತಲೆ ಎತ್ತಿದ ಈ ಹೋಟೆಲ್, ಅಂದಿನ ಕಾಲಘಟ್ಟದಲ್ಲಿಯೇ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿತ್ತು.

## ತುಳು ಸಂಘಟನೆಗಳಿಂದ ಸ್ಪೀಕರ್‌ಗೆ ಮನವಿ

ಮಂಗಳೂರು: ತುಳು ಭಾಷೆಯನ್ನು ಕರ್ನಾಟಕದ ಅಧಿಕೃತ ಭಾಷೆಯಾಗಿ ಘೋಷಿಸಬೇಕು ಎಂದು ಆಗ್ರಹಿಸಿ 27 ದೇಶಗಳ ತುಳು ಸಂಘಟನೆಗಳ ಪ್ರತಿನಿಧಿಗಳು ಅಖಿಲ ಅಮೆರಿಕ ತುಳುವರ ಅಂಗಣ ಇದರ ಅಧ್ಯಕ್ಷೆ ಶ್ರೀವಲ್ಲಿ ರೈ ಮತ್ತು ಭಾಸ್ಕರ ಶೇರಿಗಾರ್, ಸರ್ವೋತ್ತಮ ಶೆಟ್ಟಿ ಅಬುದಾಬಿ ಅವರ ನೇತೃತ್ವದಲ್ಲಿ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಖಾದರ್ ಅವರು ಬೇಡಿಕೆಗೆ ಸ್ಪಂದಿಸುವುದಾಗಿ ತಿಳಿಸಿದರು. ಮುಂಬಯಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭಾಸ್ಕರ ಶೇರಿಗಾರ್ ಅವರು ಭೇಟಿ ಮಾಡಲಿದ್ದು,




ಸಾಧ್ಯವಾದರೆ ಅಲ್ಲಿಯೇ ಮನವಿ ಸಲ್ಲಿಸಲಾಗುವುದು. ಬೆಂಗಳೂರಿನಲ್ಲಿ ಭಾಸ್ಕರ್ ಶೇರಿಗಾರ್ ಮತ್ತು ಶಾಂತಾರಾಮ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲು ನಿರ್ಧರಿಸಲಾಗಿದ್ದು, ಬೆಂಗಳೂರಿನಲ್ಲಿರುವ ಪ್ರಮುಖರು ಇವರ ಜತೆ ಸೇರಿಕೊಳ್ಳಬಹುದು ಎಂದು ಸರ್ವೋತ್ತಮ ಶೆಟ್ಟಿ ಅವರು ತಿಳಿಸಿದ್ದಾರೆ.

## ಸಾರ್ವಜನಿಕರು ಬೀದಿಗಿಳಿದರೆ ಮಾತ್ರ ಸ್ಪಂದನೆ : ಶಾಸಕ ಕಾಮತ್




ಮಂಗಳೂರು: ಜೈಲ್‌ನ ಜಾಮರ್ ಸಮಸ್ಯೆಯನ್ನು ಖಂಡಿಸಿ ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲ ವತಿಯಿಂದ, ನಗರದ ಜೈಲು ಮುಂಭಾಗ ರಾಸ್ತಾ ರೋಕೋ ಪ್ರತಿಭಟನೆ ನಡೆಯಿತು. ಈ ವೇಳೆ ಮಾತನಾಡಿದ ಶಾಸಕ ವೇದವ್ಯಾಸ ಕಾಮತ್ ಅವರು, ಒಂದೋ ಜಾಮರ್ ಸಮಸ್ಯೆ ಸರಿಪಡಿಸಿ. ಅಥವಾ ಅದನ್ನು ಕಿತ್ತೊಗೆಯಿರಿ, ಇಲ್ಲವೇ ನಾವೇ ತೆಗೆದು ಬಿಸಾಕುತ್ತೇವೆ ಎಂದು, ಜೈಲು ಅಧಿಕಾರಿಗಳಿಂದ ಹಿಡಿದು ಕಮಿಷನರ್, ಜಿಲ್ಲಾಧಿಕಾರಿ, ಕೊನೆಗೆ ಗೃಹ ಸಚಿವರಿಗೂ ಹೇಳಿ ಆಗಿದೆ. ಕಾಂಗ್ರೆಸ್ಸಿನ ಪರಿಷತ್ ಸದಸ್ಯರೊಬ್ಬರಂತೂ ಕೂಡಲೇ ಈ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಪತ್ರಿಕಾ ಹೇಳಿಕೆ ಕೊಟ್ಟರೂ ಸಮಸ್ಯೆ ಮಾತ್ರ ಹಾಗೆಯೇ ಇದ್ದು ಕಾಂಗ್ರೆಸ್ ಆಡಳಿತದಲ್ಲಿ ಸಾರ್ವಜನಿಕರು ಬೀದಿಗಿಳಿದರೆ ಮಾತ್ರ ಸ್ಪಂದನೆ ಸಿಗುತ್ತಿದೆ. ಜೈಲು ಅಧಿಕಾರಿಗಳು ಸರಿಯಾಗಿದ್ದರೆ ಜಾಮರ್ ಅವಶ್ಯಕತೆಯೇ ಬರುವುದಿಲ್ಲ. ವಿಪರ್ಯಾಸವೆಂದರೆ ಈಗಲೂ ಜೈಲಿನೊಳಗೆ ಮೊಬೈಲ್ ನೆಟ್ವರ್ಕ್ ಸಿಗುತ್ತಿದೆ. ಹೊರಗಿರುವ ಜನರಿಗೇ ಸಿಗುತ್ತಿಲ್ಲ. ಇವರ ಬೇಜವಾಬ್ದಾರಿಯಿಂದಾಗಿ ಇತ್ತೀಚೆಗೆ ರೋಗಿಯೊಬ್ಬರು ತುರ್ತುಚಿಕಿತ್ಸೆ ಸಿಗದೇ ಮೃತಪಟ್ಟ ಘಟನೆ ನಡೆದಿದೆ. ಈ ಸಾವಿನ ಹೊಣೆ ಯಾರು ಹೊರುತ್ತಾರೆ? ಜೈಲು ಅಧಿಕಾರಿಗಳೇ? ಉಸ್ತುವಾರಿ ಸಚಿವರೇ? ಅಥವಾ ಮುಖ್ಯಮಂತ್ರಿಗಳೇ? ಎಂದು ಪ್ರಶ್ನಿಸಿದರು. ಆಕ್ರೋಶಿತ ಬಿಜೆಪಿ ಕಾರ್ಯಕರ್ತರು, ಜೈಲಿಗೆ ಹಾಕಲಾಗಿದ್ದ ಬ್ಯಾರಿಕೇಡ್ ನತ್ತ ನುಗ್ಗಿದಾಗ ಪೊಲೀಸರು ಬಂದಿಸಿ ಕರೆದೊಯ್ದರು.

## ಉಡುಪಿ ಜಿಲ್ಲಾಸ್ಪತ್ರೆ ನೂತನ ಕಟ್ಟಡ ಕಾಮಗಾರಿ ಸ್ಥಗಿತ!

ಉಡುಪಿ : ಕಳೆದ ಡಿಸೆಂಬರ್ ತಿಂಗಳಲ್ಲಿಯೇ ಪೂರ್ಣಗೊಂಡು ಉದ್ಘಾಟನೆಗೊಳ್ಳಬೇಕಾಗಿದ್ದ ಉಡುಪಿ ಜಿಲ್ಲಾಸ್ಪತ್ರೆ ನೂತನ ಕಟ್ಟಡಕ್ಕೆ ಹೆಚ್ಚುವರಿ ಅನುದಾನದ ಅಗತ್ಯ ಇದೆ. ಈ ಕುರಿತು ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಇನ್ನೂ ಹೆಚ್ಚುವರಿ ಅನುದಾನ ಬಿಡುಗಡೆಯಾಗಿಲ್ಲ. ಈ ಕಾರಣದಿಂದ ಸದ್ಯ ಕಟ್ಟಡ ಕಾಮಗಾರಿ ಸ್ಥಗಿತಗೊಂಡಿದೆ. ಶಿಲಾನ್ಯಾಸ ನೆರವೇರಿಸಿ 3ವರೆ ವರ್ಷಗಳು ಕಳೆದರೂ ಕಟ್ಟಡ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಎಸ್‌ಟಿಪಿ ನಿರ್ಮಾಣ, ಆಪರೇಶನ್ ಥಿಯೇಟರ್ ಇಂಟೀರಿಯರ್, ರಸ್ತೆ ಸೇರಿದಂತೆ ಸುಮಾರು 6.5



ಕೋಟಿ ರೂ. ವೆಚ್ಚದ ಬಾಕಿ ಕಾಮಗಾರಿಗಳು ಇನ್ನೂ ಬಾಕಿ ಉಳಿದಿವೆ. ಹಾಗಾಗಿ ಬಾಕಿ ಕಾಮಗಾರಿ ಗಳಿಗೆ ಅನುದಾನ ಬಿಡುಗಡೆ ಮಾಡಲು ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.




## ಅರಸು ಅಂತಾರೆ ನಿರ್ದೇಶನದಲ್ಲಿ ಗಣೇಶ್ ಚಿತ್ರ..



ರಾಮನವಮಿಯ ಶುಭದಿನದಂದು ಬಸವೇಶ್ವರ ನಗರದಲ್ಲಿರುವ ಗಣೇಶನ ದೇವಸ್ಥಾನದಲ್ಲಿ ಎಸ್ ಎನ್ ಟಿ ಎಂಟರ್‌ಪ್ರೈಸ್ ಲಾಂಛನದಲ್ಲಿ ಎಸ್ ಸಿ ರವಿ ಭದ್ರಾವತಿ ಅವರು ನಿರ್ಮಿಸುತ್ತಿರುವ, ಗೀತಸಾಹಿತಿ ಅರಸು ಅಂತಾರೆ ನಿರ್ದೇಶನದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ನಾಯಕರಾಗಿ ನಟಿಸುತ್ತಿರುವ ನೂತನ ಚಿತ್ರದ ಮುಹೂರ್ತ ಸಮಾರಂಭ ನೆರವೇರಿತು. ನಿರ್ಮಾಪಕ ರವಿ ಅವರ ಸಹೋದರಿಯರು "ಪ್ರೊಡಕ್ಷನ್ ನಂ 1" ಚಿತ್ರದ ಮೊದಲ ಸನ್ನಿವೇಶಕ್ಕೆ ಆರಂಭ ಫಲಕ ತೋರುವ ಮೂಲಕ ಚಾಲನೆ ನೀಡಿದರು. ನಾಯಕಿಯಾಗಿ "ಹನುಮಾನ್" ಖ್ಯಾತಿಯ ಅಮೃತ ಅಯ್ಯರ್ ಅಭಿನಯಿಸುತ್ತಿದ್ದು, ರಂಗಾಯಣ ರಘು, ರವಿಶಂಕರ್ ಗೌಡ, ಕಾಕ್ರೋಜ್ ಸುಧೀ ತಾರಾಬಳಗದಲ್ಲಿದ್ದಾರೆ. ಸುಜ್ಞಾನ್ ಛಾಯಾಗ್ರಹಣ, ಅಕ್ಷಯ್ ಪಿ ರಾವ್ ಸಂಕಲನ, ಸಂಭಾಷಣೆ ಕ್ರಾಂತಿ ಕುಮಾರ್ ಹಾಗೂ ಶೈಲೇಶ್ ಕುಮಾರ್ ಅವರದ್ದಾಗಿದೆ.

## 'ವರ್ಣವೇದಂ'ಗಾಗಿ ಹಾಡಿದ ಸೋನು ನಿಗಂ..



ತಮ್ಮ ಅಮೋಘ ಕಂಠಸಿರಿಯಿಂದ ವಿಶ್ವದಾದ್ಯಂತ ಹೆಸರು ಮಾಡಿರುವ ಜನಪ್ರಿಯ ಗಾಯಕ ಸೋನು ನಿಗಂ, "ನಾನು ಮತ್ತು ಗುಂಡ" ಚಿತ್ರದ ಖ್ಯಾತಿಯ ನಿರ್ದೇಶಕ ಶ್ರೀನಿವಾಸ್ ತಿಮ್ಮಯ್ಯ ನಿರ್ದೇಶನದ "ವರ್ಣವೇದಂ" ಚಿತ್ರಕ್ಕಾಗಿ " ಓ ವೇದ ಓ ವೇದ" ಎಂಬ ಸುಂದರ ರೊಮ್ಯಾಂಟಿಕ್ ಹಾಡು ಹಾಡಿದ್ದಾರೆ. ಗಗನ್ ಭಡೇರಿಯಾ ಸಂಗೀತ ನೀಡಿರುವ ಈ ಹಾಡನ್ನು ನಿರ್ದೇಶಕ ಶ್ರೀನಿವಾಸ್ ತಿಮ್ಮಯ್ಯ ಬರೆದಿದ್ದಾರೆ. ಇತ್ತೀಚಿಗೆ ಈ ಹಾಡಿನ ಧ್ವನಿಮುದ್ರಣ ನಡೆದಿದ್ದು, ಸದ್ಯದಲ್ಲೇ ಚಿತ್ರೀಕರಣವಾಗಲಿದೆ. ಭೂಷಣ್ ನೃತ್ಯ ನಿರ್ದೇಶನ ಇದು ಶ್ರೀನಿವಾಸ್ ತಿಮ್ಮಯ್ಯ ಫಿಲಂ ಫ್ಯಾಕ್ಟರಿ ಲಾಂಛನದಲ್ಲಿ ಭೀಮೇಶ್, ಚಂದ್ರಶೇಖರ್, ವಿಶ್ವನಾಥ್, ಶೈಜು, ರಾಜೇಶ್ ಗೋಸ್ವಾಮಿ ನಿರ್ಮಾಣ ಮಾಡುತ್ತಿದ್ದು ನೈಋತ್ಯ ಹಾಗೂ ಪ್ರತೀಕ್ಷ ನಾಯಕ ನಾಯಕಿಯಾಗಿ ನಟಿಸುತ್ತಿದ್ದಾರೆ.

## ಏಪ್ರೀಲ್ 11ಕ್ಕೆ ತೆರೆಗೆ ಬರಲಿದೆ "ಮೀರಾ"..

ಅಸ್ತ್ರ ಪ್ರೊಡಕ್ಷನ್ ಬ್ಯಾನರ್‌ನಲ್ಲಿ ಲಂಚು ಲಾಲ್ ಕೆ.ಎಸ್.ನಿರ್ಮಿಸಿರುವ, ಅಶ್ವಥ್ ನಿರ್ದೇಶನದ 'ಮೀರಾ' ಚಲನಚಿತ್ರ ಏಪ್ರಿಲ್ 11ಕ್ಕೆ ಬಿಡುಗಡೆಯಾಗಲಿದೆ ಎಂದು ಚಿತ್ರದ ನಿರ್ಮಾಪಕ ಲಂಚುಲಾಲ್ ಕೆ.ಎಸ್.ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿ, ಈ ಚಿತ್ರವನ್ನು ಅಶ್ವಥ್ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶಿಸಿದ್ದಾರೆ. ಈ ಚಿತ್ರ ತುಳು ಚಿತ್ರರಂಗದಲ್ಲಿ ಮಹತ್ವದ ಮೈಲಿಗಲ್ಲು ಆಗಲಿದೆ, ಈ ಚಿತ್ರ ತುಳು ಸಿನಿಮಾ ಇಂಡಸ್ಟ್ರಿಯಲ್ಲಿ ಮೊದಲ ಮಹಿಳಾ ಪ್ರಧಾನ ಚಿತ್ರವಾಗಿದೆ. ಚಿತ್ರದಲ್ಲಿ ಇಶಿತಾ ಶೆಟ್ಟಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅರವಿಂದ್ ಬೋಳಾರ್, ಸ್ವರಾಜ್ ಶೆಟ್ಟಿ, ಜೆ.ಪಿ. ತೂಮಿನಾಡು, ಪ್ರಕಾಶ್ ತೂಮಿನಾಡು, ಮಂಜು ರೈ ಮೂಳೂರು, ರೂಪಶ್ರೀ ವರ್ಕಾಡಿ, ಯತೀಶ್ ಪೂಜಾರಿ, ಅಶ್ವಥ್, ಬೇಬಿ ಲಕ್ಷ್ಯ ಮುಂತಾದ ಕಲಾವಿದರ ಜತೆ ಮುಂಬೈ ಮೂಲದ ತುಳು ಬ್ಲಾಗರ್ ನಟಿ ರಕ್ಷಿತಾ ಶೆಟ್ಟಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



## ಹೇಳು ಹೇಳು ನೀನೇ ಜೀವ ಎಂದ ವಂಶಿ..

ಶಿವರಾಜ್‌ಕುಮಾರ್ ಪುತ್ರಿ ನಿವೇದಿತಾ ಶಿವರಾಜ್‌ಕುಮಾರ್ ಶ್ರೀ ಮುತ್ತು ಸಿನಿ ಸರ್ವಿಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿರುವ 'ಫೈರ್ ಫ್ಲೈ' ಸಿನಿಮಾ ಏಪ್ರಿಲ್ 24ಕ್ಕೆ ತೆರೆಗೆ ಬರ್ತಿದೆ. ವಂಶಿ ಕೃಷ್ಣ ನಟಿಸಿ, ನಿರ್ದೇಶಿಸಿರುವ ಈ ಚಿತ್ರದ ಹಾಡುಗಳು ಈಗಾಗಲೇ ಗಮನಸೆಳೆಯುತ್ತಿವೆ, ಇದೀಗ ಚಿತ್ರದ ಮತ್ತೊಂದು ಹಾಡು ಬಿಡುಗಡೆ ಮಾಡಲಾಗಿದೆ. ಹೇಳು ಹೇಳು ನೀನೇ ಜೀವ ಎಂಬ ಹಾಡಿಗೆ ಧನಂಜಯ್ ರಂಜನ್ ಸಾಹಿತ್ಯ ಬರೆದಿದ್ದು, ಕೇಶವ್ ಉನ್ನಿಕೃಷ್ಣನ್ ಹಾಗೂ ಮಾಧುರಿ ಶೇಷಾದ್ರಿ ಧ್ವನಿಯಾಗಿದ್ದಾರೆ. ಚರಣ್ ರಾಜ್ ಟ್ಯೂನ್ ಹಾಡಿನ ತೂಕವನ್ನು ಮತ್ತಷ್ಟು ಹೆಚ್ಚಿಸಿದೆ. ಬಹಳ ವಿಭಿನ್ನವಾಗಿ ಹಾಡನ್ನು ಕಂಪೋಸ್ ಮಾಡಲಾಗಿದೆ. 'ಫೈರ್ ಫ್ಲೈ' ಸಿನಿಮಾದಲ್ಲಿ ಯುವ ನಾಯಕ ವಂಶಿಗೆ ಜೋಡಿಯಾಗಿ ರಚನಾ ಇಂದರ್ ಸಾಥ್ ಕೊಟ್ಟಿದ್ದು, ಅಚ್ಯುತ್ ಕುಮಾರ್, ಸುಧಾರಾಣಿ, ಶೀತಲ್ ಶೆಟ್ಟಿ, ಆನಂದ್ ನೀನಾಸಂ, ಈ ಚಿತ್ರದ ಮುಖ್ಯ ಭೂಮಿಕೆಯಲ್ಲಿ ಕಾಣಸಿಕೊಂಡಿದ್ದಾರೆ.









Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 **9880109212**